ಚಿಲಿಯನ್ ನೈಟ್ರೇಟ್ ಒಫ್ ಸೋಡಾವನ್ನು ರಾಣಾಪೇಟೆಯಲ್ಲಿರುವ ಮೆಸರ್ಸ್ 'ಏಕ್ಯಾ' ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಿನ ಚೀಲ 1ರ ರೂಪಾಯಿ 6–8–0ರಂತೆ ವದಗಿಸಿ ಕೊಡುವದಲ್ಲದೆ, ಮಡಿಕೇರಿ, ವೀರಾಜಪೇಟೆ ಮತ್ತು ಗೋಣಿಕೊಪ್ಪಲುಗಳಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. 7–6–0ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ದರ್ಮೊರ್ಧವಾಗಿ ಪುಂಡುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರಿಯಬಹುದು

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
24–23 ಪೋ. ಬಾ. ನಂ 469, ಕಲ್ಕತ್ತಾ.

(2) ಮಿಸ್ಟರ್ ಯಂ ಯಂ. ಬೆಳ್ಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

Arms, Ammunition and Shooting Requisites !!!



Current Illustrated Catalogue Free on Application !

D B. B. L. Rifles	Rs.	120	to Rs.	2750.
S B. B L "	"	35	to "	950.
D. B. B. L Guns	"	50	to "	1350
S B B L. "	"	35	to "	275.
D. B M. L. "	"	45	to "	135.
S B M L "	"	30	to "	80
B. L Revolvers	"	35	to "	350.
Antomatic Pistols	"	30	to "	150.

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24–9 210 Abdul Rehman Street, BOMBAY.

ಎಂ. ಎಸ್. ಶಿದ್ಧಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

1. "ದಿಲ್ ಬಹರ್ ಫ್ಲೂಟ್" ಸಿಂಗಲ್ ರೀಡ್ ಹಾರ್ಮೋನಿಯಂ	1 ಕ್ಕೆ	50	8	0
2. "ಸಿದ್ಧಪ್ಪಾಸ್ ಫ್ಲೂಟ್" " "	"	42	8	0
3. ಶಕುಂತಲಾ " "	"	40	0	0
4. ಮೋಹನ್ " "	"	37	8	0
5. ಮೋಸ್ಟೇಂ " "	"	35	0	0
6. ಮಹಾರಾಜಾ " "	"	32	8	0
7. ಕೊಹಿನೂರು " "	"	29	8	0
8. ಶೃಮಂಡ್ " "	"	27	8	0
9. ವಿಜಲೀ " "	"	25	0	0
10. "ದಿಲ್‌ಬಹರ್ ಫ್ಲೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ	1 ಕ್ಕೆ	85	0	0
11 ಸ್ಪೆಷಲ್ "	"	56	0	0
12. ಮೋಹನ್ " "	"	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಸಹಿತ ಪಾತ್ರಿಯೊಂದಿಗೆ ಬಂದೊಬಸ್ತು ಆದ ಫೌಂಟನ್ ಪೆನ್‌ಗಳು.

ಪರ್ಫೆಕ್ಟ್ ಮೆಂಡರ್ ಫೌಂಟೆನ್ ಪೆನ್	1ಕ್ಕೆ	3	0	0
" ಬಿಗ್‌ಬ್ಯಾರಲ್ "	"	3	2	0
" ಸ್ಕ್ರೂಕ್ಯಾಪ್ "	"	3	8	0
" ಮೊಟ್ಲ್ ಕೆಲಸ "	"	3	14	0
" ಮೊಟ್ಲ್ ಸ್ಕ್ರೂಕ್ಯಾಪ್ "	"	4	4	0
" ಬ್ಯಾನ್‌ಕೆಲರ್ ಸೆಲ್ಫ್‌ಫಿಂಗ್ ಪೆ "	"	5	8	0
" ಸೇಫ್ಟು ಪೆನ್ "	"	6	8	0
" ಲೇಡೀಸ್ ಸೈಜಿನ ಮೊಟ್ಲ್ ಕಲರ್ ಪೆನ್	"	4	8	0
ಬ್ಲಾಕ್‌ಬರ್ಡ್ ಪೆ 1ಕ್ಕೆ	3	8	0	ಮತ್ತು 3 12 0
ಸ್ಪಾನ್ ಪೆನ್ "	6	8	0	" 7 0 0
ಪಾರ್ಕರ್ಸ್ ಡಿಫಿಯನ್ಸ್ 1ಕ್ಕೆ	8	0	0	" 6 8 0
" ಸೆಲ್ಫ್ ಫಿಲ್ಲಿಂಗ್ ಯೂ ಸೇಫ್ಟಿ ಪೆ 1ಕ್ಕೆ	12	0	0	
ಬಿಗ್‌ಬ್ಯಾರಲ್ ಹಾರ್ಡ್ ವೇರ್ "	8	0	0	
" ಸೆವ್ಲೊನ್ ಪೆನ್ 1ಕ್ಕೆ	17	0	0	

ಹಾತ್ರಿಯೂ ಬಂದೊಬಸ್ತೂ ಆದ ಟ್ರಿಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟ್ರಿಂಪೀಸು	1ಕ್ಕೆ	2	2	0
ಜರ್ಮನ್ ಗುಂಡಾ ಕೃತಿಯ ಅಲಾರಂ ಟ್ರಿಂಪೀಸು	"	3	12	0
ಅನ್‌ಸೋಸಿಯೂ 'ಬಿ' ಟ್ರಿಂಪೀಸು	"	5	13	0
" ಅಲಾರಂ "	"	5	6	0
ಬಿಗ್‌ಬೆನ್ "	"	9	6	0
" ಡಿಲಕ್ಸ್ಸ್ ಸ್ಟ್ಯಾಂಡಿರುವ ಅಲಾರಂ ಟ್ರಿಂಪೀಸು	"	13	5	0
ಘಂಟೆ ತೋರಿಸಿ ಅಲಾರಂ ಭಾರಿಸುವ ಕ್ಯಾರೇಜ್ ಕ್ಲಾಕ್	"	7	2	0
" ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1ಕ್ಕೆ		8	10	0
" ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಭಾರಿಸುವ ಕ್ಯಾರೇಜ್ ಕ್ಲಾಕ್ 1ಕ್ಕೆ		9	12	0
ಘಂಟೆ ತೋರಿಸಿ ಇಷ್ಟವಪ್ಪು ಟೈಮಿಗೆ ಕರ್ಣಾನಂದವಾಗುವಂತೆಗಾನವನ್ನೊಡುವ ಕ್ಯಾರೇಜು ಕ್ಲಾಕ್ 1ಕ್ಕೆ		12	0	0

ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿದ್ಧಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52–52

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್" ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್[1] ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	19,240
ಜಮೂಬಂದ ರೇವಣಾತಿ —	1,83,670

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಬೇಕಾದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಲ ಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಮೊಯಿಸಿಕೆ ಮಾಡುತ್ತಾರೆ.

ಪೈಸಿಡೆಂಟರು, ಡೈರಕ್ಟರ್.
ಕೋದಂಡ ಅಪ್ಪಯ್ಯನವರು, ಕೊಂಗಟ್ಟಿರ ಅಪ್ಪಯ್ಯ
ರಾವ್ ಬಹದ್ದೂರ್. ನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1–5–1929.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರೀತಿ ಪುಸ್ತಕಗಳು ಕೂಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವೈಯ್ಯನವರ ಮತ್ತು ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ವಾಪತಿ ಮಾಡಿ ರೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು ಮತ್ತು—ಮೆ. ಪೇರಿಯಂಡ ಪೂವೈಯ್ಯನವರು.
ಮರಿನಾಡು—ಮೆ. ಕೀಕೇರಿ ಅಯ್ಯಪ್ಪನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾಣಜೇರಂ ನಂಜಪ್ಪನವರು, ಮತ್ತು, ಮೆ. ಮಂಡೇಪಂಡ ಸೋಮೈಯ್ಯನವರು. (ಖಾದಿಭಂಡಾರ.)
ಮೂರ್ನಾಡು—ಮಚೆಯಂಡ ದೇವೈಯ್ಯನವರು,
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮೆ. ಟಿ. ಆರ್. ರಾಮೈಯ್ಯನವರು,
ಗೋಣಿಕೊಪ್ಪಲು—ಮೆ. ಚಮ್ಮಂಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮೈಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಮೈಯ್ಯನವರು,

ಸೂಚನೆ:—ಪ್ರಿಂಟು ಆದ ರೀತಿ ಪುಸ್ತಕಗಳಿಗೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮೂರಾಟಿಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರಸ್ಥೆಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ಡಾವ ಬರೆದು ರಿಜಿಸ್ಟ್ರಾರ್ರವರ ಲಕ್ಷೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸ್‌ಗಳುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಡಾಫ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಜ್ಜರ್ ಸ್ಟೋರಿನಲ್ಲಿಯೂ ಮೂರಾಟಿಕ್ಕಿವೆ. ಮೇನೇಜರ್,
"ಕೊಡಗು" ಮಡಿಕೇರಿ.

12 bore Victor Cartridges Rs. 10/- Per 100

Mahomedally-Noorbhoy.

ARMS & AMMUNITION MART

327 Abdul Rehman Street.

38-34 **BOMBAY.** 3.

ಕಟುಕಷಾಯ ಮಲೆಜ ರಕ್ತ:—ಇದು ಇಂಡಕ್ಷನ್ ಮತ್ತು ಕ್ವೀನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಕ್ಕೆ ಬಿಟ್ಟು ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0; 3ಕ್ಕೆ ರೂ. 4–0–0; 6ಕ್ಕೆ ರೂ 7–8–0, 12ಕ್ಕೆ ರೂ. 14

ಚಂದನಾಸವ:—ಇದು ಪ್ರಮೇಹ ಮತ್ತು ಕೃಚ್ಛ್ರ, ಮುಕ್ತ ಹಸ್ತನಾಗಿ ಹೋಗುವುದು, ಮುತ್ರಕೋಶದ ಉರಿ, ಮುತ್ರ ಏಂದಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮುತ್ರ ಹೊಯ್ಯುವಾಗ ಉರಿಯುವುದು, ಮುತ್ರ ನಾಳದಿಂದ ಕೀವು ಬರುವುದು, ಮುತ್ರದಲ್ಲಿ ಧಾತು, ಹುಡಿ ಹೋಗುವುದು, ಅಗಾಗ್ಗೆ ಮುತ್ರ ಬರುವುದು, ಮುತ್ರ ಕಡಿಯಲಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು. ಇವುಗಳಿಗೆ ಪರಮ ಔಷಧಿ- ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1–4–0 3–8–0; 6–12–0.

ರೋಮನಾಸಿನಿ:– ಈ ಹುಡಿಯನ್ನು ಸೀನಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಗಳಿಗೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣು ತಿರಿಯುವುದು, ತಲೆಯಿಂದ ಕೀವು ಸೋರುವುದು, ಕೆಟ್ಟನಿದ್ರೆ, ಕಣ್ಣು ನೋವು, ಅಪಸ್ಮಾರ ಖಿನ್ನ ಬಾಧೆದಿರುವುದು, ಸೆನಪು ಕಡಿಮೆ ಕಂಡುಹೋಗುವುದು. ಇವುಗಳೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಆಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇರುವ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0- ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ.

ಏಳಾಸ:—ಮನೋಲ್ಲಾಸಿನಿ ಕಂಪನಿ.

52—30 ೨. ಮಂಗಳೂರು.

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವೈವಾಟದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ } 1000 ರೂಪಾಯಿಗೆಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25.
ಹೆಚ್ಚಾಗಿ ಸಿಕ್ಕುವ ಬೋನಸು } 1000 ,, ಎಂಡೌಮೆಂಟ್ ,, ,, —ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.

ಪುನಹ ಒಂದು ಹೊಸ ಪಾಲಿಸಿಯನ್ನು 'ಓರಿಯಂಟಲ್' ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು:—

ಓರಿಯಂಟಲ್ ಬಿಲ್ಡಿಂಗ್ಸ್, } 52—19 ಯೆಲ್. ಆರ್. ಕೃಷ್ಣಸಾಮೈಯ್ಯರ್.
ನಂ. 1. ಸೌತ್ ಪೆರೇಡ್, ಬೆಂಗಳೂರು. ಬ್ರಾಂಚ್ ಸೆಕ್ರೆಟರಿ.

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.

ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ಯಾರೂಪ್ಸೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಸುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಪೆಟ್ಟಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯೋಗ್ಯವಾಗಲೂ ದೊರೆಯುತ್ತವೆ. ನಮ್ಮಲ್ಲಿ ೫ ವರ್ಷಗಳು ಗ್ಯಾರಂಟಿಯೊಳಗೆ ನಡೆಯುವ ಅತಿ ಸುಂದರವಾಗಿಯೂ, ರಸ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರ ನನ್ನ ಉಚಿತವಾಗಿಯೂ ಭಾಯಮಾನವಾಗಿಯೂ, ಪಡೆಯ ಒಮದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚಿಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು

24—23

EMPIRE OF INDIA LIFE ASSURANCE COMPANY, LIMITED.

(Established 1897.)

A Monthly payment of Rs. 12/8/– will secure a With Profit Assurance as shown below which will further increase by Bonus Additions.

Age next Birthday.	Assurance payable at Death.				Endowment Assurances payable at Death or at end of		
	Whole Life.	Premiums Limited to 15 Years	20 Years	25 Years.	20 Years	25 Years.	30 Years.
	Rs	Rs.	Rs.	Rs.	Rs.	Rs.	Rs.
20	5,820	3,550	4,250	4,800	3,010	3,800	4,520
35	5,140	3,290	3,930	4,390	2,930	3,620	4,220
35	4,480	3,030	3,600	3,970	2,810	3,400	3,870

Wanted:—Agents at Mercara, Somwarpet and Siddapur

HEAD OFFICE: Empire of India Life Building, BOMBAY.

BRANCH OFFICE. 152, Commercial Street BANGALORE.

21—21.

Printed & published by P. I. Belliappa, at "Kodagu" Press, Mercara for "Kodagu" Ltd,

R.-S. No. A. 1538.
If not delivered please return to
"KODAGU" OFFICE, MERCARA.

ಕೊಡಗು.

ಸ್ವದೇಶ ಭಾಷಾಭಿಮಾನ ವಿದ್ಯಾ ಪ್ರಚಾರ ಪ್ರಯುಕ್ತವಾಗಿ ॥ ವಿಶ್ವಮುಕ್ಕೇತ ತೇಜಸಾನಾಂ ಸುಸ್ಥಿರಾ ರಾಜ್ಯ ಸಂಪದಾ ॥

ವಾರ್ಷಿಕ ಚಂದಾ ರೂ. ೩–೮–೦.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ–ಪೊದ್ದಂಡ ಐ. ಪೆಳ್ಳಪ್ಪ.

ಸಂಪುಟ ೭] ನುಡಿಕೇರಿ, ಸರ್ ೧೯೨೮ ನೇ ಇಸವಿ ಮೇ ತಾರೀಖು ೩ನೇ ಶುಕ್ರವಾರ [ಸಂಚಿಕೆ ೪೦

Post Box 423,
TRIPLICANE, MADRAS

MANUFACTURES AND DEALS IN ALL:—

(1) Gemset Jewels, gold and silver articles of all pattns
(2) Race Cups. Caskets, medals etc., for presentation pposes
(3) Trovels. Keys, Locks etc., for ceremonial purposes.

JEWELLER BY APPOINTMENT TO His Excellency THE GOVERNOR OF MADRAS.

Catalogue Free to Bona fide Enquirers

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro-plating, gilding and nickelling.
(3) Binguy old jewellery, or undertaking to effect sale.

V. SUBRAMANIA IYER
JEWELLER

Telephone:— 3145

Telegrams:— "PRECIOUS"

Gold-smith, Silver-smith, & Dealer in all Gemset Jewels.

152–33

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ
ಒಳ್ಳೆಯ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ
ರತನ್ ಮಿಶ್ರಿ ಹಲ್ವಾ
ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು ನೀರಾಗಿರುವಿಕೆ ಅಗಾಗ್ಗೆ ಸ್ವಪ್ನದಲ್ಲಿ ಸ್ಖಲನವಾಗುವಿಕೆ, ಅತಿ ಸ್ವೇಚ್ಛಾಪ್ರವರ್ತನೆಯಿಂದಲೂ, ಬಾಲ್ಯದ ಅಜ್ಞಾನದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ, ತೀಕ್ಷ್ಣ ಸ್ಖಲನವಾಗುವಿಕೆ, ಶಕ್ತಿಯು ಕಮ್ಮಿಯಾಗಿರುವಿಕೆ, ಮೂತ್ರದ್ವಾರದ ವ್ರಣ, ಉರಿಯುವಿಕೆ, ಹಾಲಿನ ಮೇಹ ವ್ಯಾಧಿಯಿಂದ ಶರೀರವು ನಶಿತಿ ಹೋಗುವಿಕೆ, ನೇತ್ರರೋಗ, ಸರ್ವವ್ಯಾಧಿ, ಉಷ್ಣವಾಯು ಸಂಬಂಧರೋಗದ ಕೂಲೆ, ವೇಹಪಡೆ, ಅಜೀರ್ಣ, ಕೆನ್ನು ಈ ವಿಧವಾದ ನಾನಾ ರೋಗಗಳನ್ನು ಗುಣಪಡಿಸಿ ಧಾತುಪುಷ್ಟಿ, ಶರೀರ ಪುಷ್ಟಿಯನ್ನುಂಟುಮಾಡುವುದು ಹೊಸದರು ಸೇವಿಸಿದಲ್ಲಿ ಉಷ್ಣಗರ್ಭಕಾರಕ ವ್ಯಾಧಿಗಳಾ ನೀಗುವವು ಸಂಪೂರ್ಣ ಉಂಟಾಗಲು ೩–೩ ಡಬ್ಬಿಗಳನ್ನು ಪಯೋಗಿಸಬೇಕು.

ಕ್ರಯ.—೧ ಪೌಂಡು ಟಿನ್ ರೂ. ೫—೦—೦, ಅರ್ಧ ಪೌಂಡು ಟಿನ್ ಗಿಕ್ಕೆ ರೂ. ೨—೮—೦.

ಚಿಕ್ಕಪೇಟೆ, ವಿಲಾಸ ಬಳ್ಳು ಡಿಪೋವಿನಲ್ಲೂ ಮಾರಲ್ಪಡುತ್ತೆ.

52–19. ವೈದ್ಯಕರು—ರತನ್ ಮಿಶ್ರಿ ಡಿಪೊ. (ಆಂಜನೇಯ ಜ್ಯೋತಿಷಾಲಯ,) ಚಾಡೇಶ್ವರಿಗುಡಿ ಬೀದಿ, ಬೆಂಗಳೂರು ಸಿಟಿ.

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ಸೂಚಿಸಿರಿ)

ಅಪೂರ್ವ ಸಂದರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸ ಬೇಕಾದರೆ ಇದೀಗ ಅಪೂರ್ವ ಸಂದರ್ಭ.

ಅತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದಾರ್ಬಲ್ಯದಿಗಳನ್ನು ಜೇಗನೆ ಗುಣಮಾಡುವುವು.

32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ I ಧರ್ಮಾರ್ಥ II

ಕಾಮಶಾಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ದೇಶಾದಿಗರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

ಆರೋಗ್ಯನಿಗ್ರಹ ಔಷಧಾಲಯ,
52–39 ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೇಷ್ಠವಾದ ಕುಟುಂಬ ಔಷಧಗಳು.

ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದದ್ದು.

ಶ್ರೇಷ್ಠವಾದ ನೇಪಾಳದ ಕನ್ಯಾರಿ ತೊಲ ರೂ. 10. ಅಸಲ್ ಗೋರೋಜನ ತೊಲ 1ಕ್ಕೆ ರೂ. 12.
ಶ್ರೇಷ್ಠವಾದ ಅಧವಾ ಮುಂಮುಮ್ಯಾಹುವ್ವ 1ಕ್ಕೆ ರೂ. 3½ ಪಚ್ಚ ಕರ್ಪೂರ ತೊಲ 1ಕ್ಕೆ ರೂ. 2½.
ಅಸಲು ಇಂಗು ತೊಲ 10 ಕ್ಕೆ ರೂ. 1.

ಶ್ರೇಷ್ಠವಾದ 108 ಮಣಿವುಳ್ಳ ರುದ್ರಾಕ್ಷಿಜಪ ಮಾಲೆ 1ಕ್ಕೆ ಆಣೆ 6, 8, 12, ರೂ 1, 2, 5, 10 ರ ವರೆಗೆ
32 ಮಣಿವುಳ್ಳ ರುದ್ರಾಕ್ಷಿಜಪಮಾಲೆ 1ಕ್ಕೆ ರೂ. 1, 2, 3, 4, 5, 8, 10 ರ ವರೆಗೆ.

ಮತ್ತು ಎಲ್ಲಾ ವಿಧವಾದ ದೇಶೀಯ ಔಷಧೀಗಳಿಗೆ, ಕಣಗಳು, ಮುಗುಟ ಪಿಗ್ಮೆಂಟುಗಳಾದಿ ಎಲ್ಲಾ ಸರಕುಗಳು ದೊರೆಯುತ್ತೆ. ಸಾವಕಾಶ ಮಾಡದೆ ಈ ಜಾಹೀರಾತನ್ನು ಓದಿ ಆರ್ಡರು ಕೊಡಿರಿ. ಸರ್ಕಾರಿ ಸಾಮಾನುಗಳು ಸುಲಭ ಕ್ರಯಕ್ಕೆ ದೊರೆಯುತ್ತೆ.

ಅಪ್ಪಣೆ—
ಭಾರದ್ವಾಜ ಕಂಪನಿ, "ಸಿಲ್ಕ್ ಹೋಮ್ಸ್," ಶ್ರೀಕಾಶಿ.

BHADWAJ & CO.,
"SILK HOME"
Benares City.

52–36

ಏಕೆ ನರಳುತ್ತೀರಿ? ಬರುಗಳು ಹುಣ್ಣಾ ಅಂಮ್ಮ ಸಿ. ಯಸ್. ಮೆಕಪೈ ಕ್ರಯವು ಇಲ್ಲದೆ ಉಚಿತವಾಗಿ ಕೊಡು ಆಪೈಯ್ಯನವರು ಸೂಚಿಸಿ ಪತ್ನಿಯವರು ಅನುಮೋದಿ ಮುಕ್ತಾಯನವರು ಮೆ. ಪಿ. ವಿ. ವೈದ್ಯ ವಿಚಿಸಿದರು. ಆದರೆ ಮೆ. ಬೆಳ್ಳಪ್ಪ ಗೆ ನಿಲ್ಲಲು ಇಚ್ಛಿಸುವದಿಲ್ಲವೆಂ ಕೊಡಗಿದುಕೊಂಡರು. ಮೆ. ಬಿದ್ದಂಡ ಎಂಬ ಪುಸ್ತಕವನ್ನು ಓದಿ ಸಿ ಯಸ್. ಉಪೈಯ್ಯನವರ ಹೆಸರಿ ಹಾರ ಮಾಡಿಕೊಂ ಇದಕ್ಕೆ ಅನುಮೋದಕರು ಯಾರೂ ಇ ಳಾ ಜಾರದಂತೆ. ಬಿದ್ದು ಹೋಯಿತು. ಮೆ. ಮಲ್ಲಚ್ಚಿರ ಮುಮೆ. ಮನೆಮನಂಡ ಯಪ್ಪ ಕಾಳೆಯಂಡ ಅಮ್ಮ ಕೂ 1/91 ಚೈನ ಸಿದನ್ನು ಮೆ. ಅಧ್ಯಕ್ಷರ ಭಾಷಣದಲ್ಲಿ ಸೇರಿತು ಆಧ್ಯಕ್ಷರ ಭಾಷಣದಲ್ಲಿ

52–37

ಇಚ್ಛೆ

ಕೊಡಗು.

ಸರ್ ೧೯೨೬ನೇ ಇಸವಿ

ಮೇ ತಾ. ೩ನೇ ಶುಕ್ರವಾರ.

ಖಾದಿ ಪ್ರಚಾರ.

ಸ್ವರಾಜ್ಯ ಪೋರಾಟದಲ್ಲಿ ಪರದೇಶೀ ಬಟ್ಟೆ ಬಹಿಷ್ಕಾರವನ್ನೂ, ಖಾದಿ ಬಟ್ಟೆ ಪ್ರಚಾರವನ್ನೂ ಪ್ರಾಮುಖ್ಯವಾದ ಅಂಗವಾಗಿ ಇಂಡಿಯನು ನೇಶನಲ್ ಕಾಂಗ್ರೆಸ್ಸಿನವರು ತೀರ್ಮಾನಿಸಿರುವದು ವಾಚಕರಿಗೆ ತಿಳಿದೇ ಇದೆ. ದೇಶದ ಮುಂದಾಳುಗಳು ಪ್ರತಿ ದಿನವೂ ಈ ಕಲಸವನ್ನು ಮಾಡುತ್ತಿರಬೇಕಾದರೂ, ಪ್ರತಿ ತಿಂಗಳ ಮೊದಲನೇ ಆದಿತ್ಯವಾರವನ್ನು ಈ ಕಾರ್ಯ ನಡಿಸಲಿಕ್ಕಾಗಿಯೇ ಉಪಯೋಗಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಿಶ್ಚಯಿಸಿರುವ ಮೇರೆ ಈಗ ಹಿಂದೂಸ್ಥಾನದಲ್ಲೆಲ್ಲಾ ಜಾರಿಗೆ ತರುತ್ತಿದ್ದಾರೆ. ನಮ್ಮ ದೇಶದಲ್ಲೂ ಕೆಲವರು ಖಾದಿ ಪ್ರಚಾರದ ಬಗ್ಗೆ ಪಿದ್ದರ್ ಬಟ್ಟೆಯನ್ನು ಮನೆ ಮನೆಗೆ ತೆಗೆದುಕೊಂಡು ಹೋಗಿ ಮೊರಾಟ ಮಾಡಿದರೆಂದು ತಿಳಿಯಬಹ್ಕೆನೆ. ಜನರಿಗೆ ಸಾಕಷ್ಟು ಖಾದಿ ಬಟ್ಟೆಯನ್ನು ಒದಗಿಸಿಕೊಟ್ಟರೆ ಅವರು ಅದನ್ನು ಬಹು ಸಂತೋಷದಿಂದ ಉಪಯೋಗಿಸಲು ಉತ್ಸಾಹವುಳ್ಳವರಾಗಿದ್ದಾರೆಂಬ ಇವರ ಅನುಭವಕ್ಕೆ ಬಂದಿದೆ. ಖಾದಿ ಮೊರಾಟದ ಅಂಗಡಿಗಳೂ, ಖಾದಿಯನ್ನು ಮನೆ ಮನೆಗೆ ತೆಗೆದುಕೊಂಡು ಹೋಗಿ ಮಾರುವ ಸ್ವಯಂ ಸೇವಕರೂ ದೇಶದಲ್ಲಿ ಹೆಚ್ಚಬೇಕಾಗಿದೆ. ಕೊಡಗಿನ ಜನರಿಗೆ ಖಾದಿಯಲ್ಲಿ ತಕ್ಕಷ್ಟು ಅಭಿರುಚಿ ಹುಟ್ಟಿರುವ ಈ ಸಮಯದಲ್ಲಿ ಅವರಿಗೆ ಬೇಕಾದಷ್ಟು ಮತ್ತು ಬೇಕಾದಂಥ ಖಾದಿಯನ್ನು ಒದಗಿಸಿಕೊಡಲು ತಕ್ಕ ವ್ಯವಸ್ಥೆಗಳು ಇನ್ನೂ ಇಲ್ಲದ್ದಿರ್ಕೆ ವಿಷಾದಿಸಬೇಕಾಗಿದೆ. ಈ ದೇಶದಲ್ಲೇ ಖಾದಿಯನ್ನು ತಯಾರಿಸುವ ವ್ಯವಸ್ಥೆಯಾಗದೆ ಇರುವದೇ ಈ ಲೋಪಕ್ಕೆ ಮುಖ್ಯ ಕಾರಣವಾಗಿದೆ ಸಂಸ್ಥಾನಿಕರಷ್ಟು ತಾಲೋಕಿನ ಕಡಾವೆ ಹೋಬಳಿಯಲ್ಲಿ ಈ ದೇಶಕ್ಕೆ ಬೇಕಾದಷ್ಟು ಖಾದಿ ಬಟ್ಟೆಯನ್ನು ತಯಾರಿಸಿಕೊಳ್ಳಲು ಅವಕಾಶವಿದೆಯೆಂತ ಈ ಪೂರ್ವದಲೇ ತಿಳಿದ್ದಿರ್ದೆನೆ. ಈ ವ್ಯಾಂಕ್ಯದ ಖಾದಿ ಉತ್ಪತ್ತಿಯ ಜೇರ್ಗೋದ್ಧಾರಕ್ಕೆ ಅಖಿಲ ಭಾರತ ನೂಲುವವರ ಸಂಘವನ್ನು ಕೇಳಿಕೊಂಡರೂ ಇನ್ನೂ ಸಹಾಯ ದೊರೆಯದ್ದಕ್ಕೆ ವ್ಯಸನಪಡುತ್ತೇವೆ. ಇನ್ನಾದರೂ ದೇಶೀಯ ಖಾದಿ ಪ್ರೇಮಿಗಳು ಈ ವಿಷಯಕ್ಕೆ ತಕ್ಕಷ್ಟು ಗಮನ ಕೊಡುವಂತಾಗಿ ಆಶಿಸುತ್ತೇವೆ.

ಈ ದೇಶದಲ್ಲಿ ಬೇಕಾದಷ್ಟು ಖಾದಿಯು ಬೊರಕದಿರಲಿಕ್ಕೆ ಇನ್ನೊಂದು ಕಾರಣವೇನೆಂದರೆ—ಕೊಡಗಿಗೆ ಬೇಕಾದ ಖಾದಿ ಬಟ್ಟೆಯನ್ನೆಲ್ಲಾ ತವಿಳುನಾಡಿನ ತಿರುವೂರಿನಿಂದಲೇ ತರಿಸುವದಾಗಿದೆ. ತಿರುವೂರಿನವರಿಗೆ ಕೊಡಗಿಗೆ ಬೇಕಾದ ಬಟ್ಟೆಗಳನ್ನು ಸಕಾಲಕ್ಕೆ ಒದಗಿಸಿಕೊಡಲು ಸಾಧ್ಯವಾಗುತ್ತಿರುವದಿಲ್ಲ. ಕರ್ನಾಟಕ ಮತ್ತು ಆಂಧ್ರ ಖಾದಿ ಕೇಂದ್ರುಗಳಿಂದಲೂ ಒಟ್ಟಿಯನ್ನು ತರಿಸಿಕೊಳ್ಳುವ ಏರ್ಪಾಡು ಮಾಡುವದು ಉತ್ತಮವಾಗಿದೆ. ಈ ವಿಷಯಕ್ಕೆ ಈ ದೇಶದ ಖಾದಿ ಪ್ರೇಮಿಗಳು ಮತ್ತವಲ್ಲ ಕರ್ನಾಟಕ ಖಾದಿ ಕೇಂದ್ರದವರೂ ಕೊಡಗಿನವರಿಗೆ ಅವಶ್ಯವಿರುವಷ್ಟು ಕೈನೂಲು ಗುಣ್ಣದ ಬಟ್ಟೆಯನ್ನು ಸಕಾಲದಲ್ಲಿ ಒದಗಿಸಿಕೊಡ ಡುವಂತಾಗಿ ನಂಬುತ್ತೇವೆ.

12 bore Victor Cartridges Rs. 10/-

Mahomedally-Noorbh

ARMS & AMMUNITION MA,

321 Abdul Rehman Street.

BOMBAY. 3.

ಖಾದಿ ಬಟ್ಟೆಯನ್ನು ತ.ಸೆ.ಂತೆ ಳುಹಿಸಲು ಒರೆದಿದ್ದ ರದ್ದು ಪಡಿಸದೇಕೆಂತ ಬಸಕ್ಕೆ ನಮ್ಮ ದೇ ಶದಲ್ಲಿ ಮುಖಂಡರು ಮುಂದು ಬರಬೇಕಾಗಿದೆ ನಮ್ಮ ದೇಶದ ಪರದೇಶೀ ಜನಿ ವ್ಯಾಪಾರಿಗಳು ಹಿಂದೀಯರೇ ಆಗಿರುವರು ಹಿಂದೂದೇಶಕ್ಕೆ ಸ್ವರಾಜ್ಯ ಬೇಕೆಂಬ ಕುತೂಹಲ ಈ ವ್ಯಾಪಾರಿಗಳಲ್ಲೂ ಇದೆಯೆಂದು ಹೇಳದಿರಲಾರೆವು. ಆದರೆ ದರಿಂದ ಅವರನ್ನು ಕೋರಿಕೊಳ್ಳಲು ಜನರು ಹೋಗದಿದ್ದರೂ ಸಹ ವ್ಯಾಪಾರಿಗಳು ತಾವಾಗಿಯೇ ಇನ್ನು ಮೇಲೆ ಪರದೇಶೀ ಬಟ್ಟೆಗಳನ್ನು ವ್ಯಾಪಾರಕ್ಕಾಗಿ ತರಿಸುವುದನ್ನು ನಿಲ್ಲಿಸಿಬಿಡಲಾಗಿ ನಂಬುತ್ತೇವೆ. ಈ ವರೆಗೆ ನಡೆದ ಬಹಿಷ್ಕಾರದ ಚಳವಳಿಯಿಂದ ಮೊದಲೇ ವಿಲಾಯಿತಿಯ ಬಟ್ಟೆ ವ್ಯಾಪಾರವು ಕೆಲವು ಮಟ್ಟಿಗೆ ಕಡಿಮೆಯಾಗಿ ಅವರಲ್ಲಿ ಅಕ್ಕಪ್ಪಿ ಹುಟ್ಟಿದೆಯೆಂಬ ಪತ್ರಿಕೆಗಳಿಂದ ತಿಳಿಯಬರುತ್ತಿದೆ. ಬ್ರಿಟಿಷ್ ಸರ್ಕಾರವು ಹಿಂದೂಸ್ಥಾನಕ್ಕೆ ಸ್ವರಾಜ್ಯಕೊಡಬೇಕಾದರೂ ಇಲ್ಲಿ ಅವರ ಬಟ್ಟೆವ್ಯಾಪಾರವು ಸಂಪೂರ್ಣವಾಗಿ ನಿಲ್ಲಬೇಕಾಗಿದೆ ಆಗಲೇ ಬ್ರಿಟಿಷರು ಹಿಂದೂಸ್ಥಾನದವರಿಂದಿಗೆ ರಾಜಿ ಸಂಧಾನಕ್ಕೆ ಬರುವರು. ಪರದೇಶೀ ಬಟ್ಟೆ ಬಹಿಷ್ಕಾರಕ್ಕ ಇರುವ ಈ ಮಹತ್ವವನ್ನು ಪ್ರತಿಯೊಬ್ಬ ಹಿಂದೀಯನು, ಬಟ್ಟೆಧರಿಸುವವನೇ ಆಗಲಿ, ವ್ಯಾಪಾರಿಯೇ ಆಗಲಿ, ತಿಳಿದುಕೊಂಡು ಪರದೇಶೀ ಬಟ್ಟೆಗೆ ಬಹಿಷ್ಕಾರ ಹಾಕಲೇ ಬೇಕು.

ಖಾದಿಯನ್ನೇ ಉಪಯೋಗಿಸುವದರಿಂದ ಇನ್ನೊಂದು ಪ್ರಯೋಜನವೂ ಇದೆ. ಅದು ಹಿಂದೂಸ್ಥಾನದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವದೇ ಆಗಲಿ, ಹಿಂದೂಸ್ಥಾನದ 31 ಕೋಟಿ 89 ಲಕ್ಷ ನಿವಾಸಿಗಳಲ್ಲಿ 28 ಕೋಟಿ 64 ಲಕ್ಷ ಗ್ರಾಮಗಳಲ್ಲಿಯೂ ವಾಸಿಸುತ್ತಿರುವ ಬರೇ 3 ಕೋಟಿ 24 ಲಕ್ಷ ಪಟ್ಟಣಗಳಲ್ಲಿಯೂ ವಾಸಿಸುವವರಾಗಿದ್ದಾರೆ ಅಂದರೆ ಶೇಕಡ 90ರಷ್ಟು ಗ್ರಾಮವಾಸಿಗಳಿಗೆ. ಇವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿದೆ ಹೋದರೆ ಸ್ವರಾಜ್ಯದಿಂದ ಇವರಿಗೆ ಪ್ರಯೋಜನವೇನೂ ಆಗಲಾರದು. ಹಿಂದೂ ದೇಶೀಯರಿಗೆ ತಲೆ ಒಂದರ ದಿನಕ್ಕೆ ಸರಾಸರಿ 0—1—7 ಉತ್ಪತ್ತಿ ಮಾತ್ರ ಇದೆ ಬೇರೆ ಯಾವ ದೇಶದ ಉತ್ಪತ್ತಿಯೂ ಇಷ್ಟು ಕಡಿಮೆಯಿಲ್ಲ. ಅನೇಕರಿಗೆ ಸಂಪೂರ್ಣ ಸಂಸ್ಥಾನದಲ್ಲಿ ಇಂಥಾ ಉತ್ಪತ್ತಿಯು 3 ರೂಪಾಯಿಯೂ ಗ್ರೇಟ್ ಬ್ರಿಟನ್ನಿನಲ್ಲಿ 2—1—4ಯೂ ಇದೆ ಬರೇ ದಿನ ಒಂದರ 0—1—7 ಉತ್ಪತ್ತಿ ಇರುವ ಒಡ ಹಿಂದೀಯರ ದೇಶದಿಂದ ವರ್ಷಂಪ್ರತಿ 68 ಕೋಟಿ ರೂಪಾಯಿಗಿಂತ ಹೆಚ್ಚು ಹತ್ತಿ ಬಟ್ಟೆಗಾಗಿಯೂ, ನೂಲಿಗಾಗಿಯೂ ಪರದೇಶಗಳಿಗೆ ಹೋಗುತ್ತಿದೆ ಕಳೆದ ಹತ್ತು ವರ್ಷಗಳಿಂದ 163 ಕೋಟಿ ರೂಪಾಯಿದೆ ಈ ವ್ಯಾಪಾರದ ಮೂಲಕ ಇಂಡಿಯದಿಂದ ಸರದೇಶಗಳಿಗೆ ಹರಿದು ಹೋಗಿ ಬಿಟ್ಟಿದೆ ಇದನ್ನು ನಿಲ್ಲಿಸುವದೇ ಖಾದಿ ಬಟ್ಟೆಯ ಪ್ರಚಾರ ಪ್ರಯೋಜನ.

ಹಿಂದೂದೇಶದ ಗ್ರಾಮಗಳಲ್ಲಿ ಕಡಿಮೆ ಪಕ್ಷ ಮೂರು ತಿಂಗಳ ಮಟ್ಟಿಗೆ ಏನೂ ಕೆಲಸವಿಲ್ಲದೆ ಸುಮ್ಮನಿರುವವರ ಸಂಖ್ಯೆಯು ಸುಮಾರು 11 ಕೋಟಿಯೆಂದೂ, ಇವರ ಪೈಕಿ 6 ರಲ್ಲಿ ಒಬ್ಬರಂತೆ 184 ಲಕ್ಷ ಜನರು ಅವರ ವಿಶ್ರಾಮಕಾಲದಲ್ಲಿ ಕೈನೂಲು ಮಾಡಿದರೆ ಇಡೀ ಹಿಂದೂಸ್ಥಾನದವರಿಗೆ ಬೇಕಾದ ಒಟ್ಟಿಗೆಳನ್ನೆಲ್ಲಾ ಮಾಡಿಕೊಳ್ಳಬಹುದಾದೂ ಲೆಖ್ಖ ಹಾಕಲ್ಪಟ್ಟಿದೆ ಇದಲ್ಲದೆ ಹೋದರೂ, ಹಿಂದೀಯರಲ್ಲಿ 200 ಕ್ಕೆ ಒಬ್ಬನಂತೆ ಕೈನೂಲು ಮಾಡಿದರೂ ಬಾರತ ಭೂಮಿಗಿರುವ ಒಟ್ಟೆಯನ್ನು ಮಾಡಿಕೊಳ್ಳಬಹುದಂತೆ ಅಲ್ಲದೆ ಕೈನೂಲು ಮಾಡುವದರಿಂದ ಒಬ್ಬನಿಗೆ ದಿನಕ್ಕೆ ಕಮ್ಮಿ ಎಂದಾಣಿಯ ಸಂಪಾದನೆಯೊದಗಿದರೂ ಬರೇ 0—1—7 ಉತ್ಪತ್ತಿ ಇರುವವರಿಗೆ ದಿನಕ್ಕೆ ಕಮ್ಮಿ ಒಂದಾಣಿಯ ಸಂಪಾದನೆಯೊದಗಿದರೂ ಬರೇ 0—1—7 ಉತ್ಪತ್ತಿ ಇರುವವರಿಗೆ ಕೆಲಸವಿಲ್ಲದ ಸಮಯದಲ್ಲಿ ಒರಬಾಣಿ ಸುಖಾಪಾನಿಯೂಗುವದು ತುಂಬಾ ಲಾಭಕರ ಮೊಬಲಗಲ್ಲ ಸಂಶಯವಿಲ್ಲ ಆದ ಕಾರಣ ಕೈನೂಲಿನ ಬಟ್ಟೆಯನ್ನು ಎಲ್ಲರೂ ಉಪಯೋಗಿಸಿದರೆ ಅದನ್ನು ತಯಾರಿಸುವ ಕೆಲಸವಿಲ್ಲದೆ ಒರ್ವರಿಗೆ ಅನ್ನ ಕೊಟ್ಟಂತೆಯೂಗುವದಲ್ಲದೆ, ಪರದೇಶಗಳಿಗೆ ಹೋಗುತ್ತಿರುವ ಧನದ ಪ್ರವಾಹವೂ ನಿಲ್ಲುತ್ತದೆ ಬರೇ ಕೈನೂಲಿನಿಂಪ ಹಿಂದೂಸ್ಥಾನಕ್ಕೆ ಬೇಕಾಷ್ಟು ಬಟ್ಟೆ ನೂಡಿಕೊಳ್ಳಲು ಸಾಧ್ಯವಿಲ್ಲವೆಂತ ಸಂಶಯಪಡುವವರಿಗೆ ಮೇಲ್ಕಂಡ ವಿವರವು ತೃಪ್ತಿಯನ್ನುಂಟುಮಾಡದೆ ಇರದು. ದೇಶೀಯರಲ್ಲಿ ಸ್ವದೇಶಿ ಸ್ನೇಹವು ವಶಕ್ಕ ಬೆರೆದರೆ ದೇಶದ ಸಾಂಪತ್ತಿಕ ಸ್ಥಿತಿಯು ಉತ್ತಮವಾಗುವದಲ್ಲದೆ ಸ್ವರಾಜ್ಯ ಪ್ರಾಪ್ತಿಯೂಗುವದರಲ್ಲಿಯೂ ಸಂಶಯವಿಲ್ಲ.

ಜವಿನಾರ್ಧರ ಸಂಘದ ೧೯೩೪—೧೯೩೯ನೇ ವರ್ಷದ ವರದಿ.

1. ಉದ್ಯೋಗಸ್ಥರು

ಸಂಘವು ತನ್ನ ಮೊದಲನೇ ಯುವಕ ಅಧ್ಯಕ್ಷರಾದ ಮತ್ತು ತನ್ನ ವ್ಯಾಮುಖ್ಯ ಕೆಲಸಗಾರರಲ್ಲಿ ಒಬ್ಬರಾದ ಶ್ರೀಯುತ ವಾರ್ಣಂಗಳ ಕುಶಾಲಪ್ಪನವರನ್ನು ದೇಶದ ರಾಜಕೀಯ ಜಳವಳದ ಬಿಕ್ಕಟ್ಟಿನ ಸಮಯದಲ್ಲಿ ಕಳಕೊಂಡದ್ದು ಬಹು ದುಃಖಕರವಾದ ಸಂಗತಿಯಾಗಿದೆ ಇವರು ಸಂಘದ ಪ್ರತಿನಿಧಿಯಾಗಿ ಕಳೆದ ಡಿಸೆಂಬರಿನಲ್ಲು ನಡೆದ ಹಿಂದೂದೇಶದ ನರ್ವ ಪಕ್ಷೀಯ ಪರಿಷತ್ತಿಗೆ ಹೋಗಿ ವಾಪಸು ಬರುವಾಗ್ಗೆ ವಂಡಾಸಿನಲ್ಲಿ ಶಿವಾರ್ಪಣರಾದ ಕಾರಣ ಇವರು ಸಂಘದ ಸೇವೆ ಮಾಡುತ್ತಿದ್ದಾಗಲೇ ತಮ್ಮ ವ್ಯಾಣವನ್ನು ಬಟ್ಟದ್ದಾಯಕು ಇಂಥ ದೇಶಸೇವಾ ಧುರೀಣರು ಸಂಘಕ್ಕೆ ದೊರೆಯುವದು ಬಹು ಕಷ್ಟ. ಇವರ ಅಕಾಲ ಮರಣದಿಂದುಂಟಾದ ದುಃಖವನ್ನೂ, ನಷ್ಟವನ್ನೂ ಸೂಚಿಸುವದು ಸಂಘದ ಮಹಾ ಸಭೆಯ ಮೊದಲನೇ ಕರ್ತವ್ಯವಾಗಿದೆ. ತಾ. 12—1—'29ರಲ್ಲಿ ಮರಣಾನಂತರ ಆಸ್ಪತ್ರೆಯಲ್ಲಿ ಸಂಭವಿಸಿದ ಇವರ ಮರಣಕ್ಕೆ ಕಾರ್ಯಕಾರಿ ಮಂಡಳಿಯವರು ತಾ. 19—1—'29ಗಲ್ಲಿ ನಡೆದ ವಿಶೇಷ ಮೀಟಿಂಗಿನಲ್ಲಿ ವ್ಯಸನವನ್ನು ಸೂಚಿಸಿ ಇವರ ಕುಟುಂಬಕ್ಕೆ ದುಃಖೋದ್ಗಾರವು ಕಳುಹಿಸಲಾಯಿತು ಇವರ ನಿಧನದಿಂದ ಖಾಲಿಯಾದ ಅಧ್ಯಕ್ಷಸ್ಥಾನವನ್ನು ತಾ. 9—2—29ರಲ್ಲಿ ನಡೆದ ಸಾಮಿಟಿ ವಿಶೇಷ ಮೀಟಿಂಗಿನಲ್ಲಿ ಉಪ ಅಧ್ಯಕ್ಷರಾದ ಮೆ ಸಿ. ಯನ್. ಪೆಂಕಪ್ಪಯ್ಯನವರು ಜನತಾಯಿಸಲ್ಪಟ್ಟರು ಈ ಸಂಬಂಧ ಉಂಟಾದ ಖಾಲಿ ಉಪಾಧ್ಯಕ್ಷರ ಸ್ಥಳಕ್ಕೆ ಮೆ. ಕೋಟೆರ ಚಿಣ್ಣಪ್ಪನವರೂ, ಮೆ ಚಿಣ್ಣಪ್ಪನವರ ಸ್ಥಳಕ್ಕೆ ಬೇಟ್ಟೋಳಂಡ ಮಾಪ್ಪಯ್ಯನವರು ಕಮಿಟಿ ಮೆಂಬರಾಗಿಯೂ ಆರಿಸಲ್ಪಟ್ಟರು. ಈಗಿನ ಕಾರ್ಯಕಾರಿ ಮಂಡಳಿಯ ಎರಡು ವರ್ಷ ಅಧಿಕಾರವು ಮುಗಿದದ್ದರಿಂದ ಈ ಮಹಾಸಭೆಯಲ್ಲಿ ಹೊಸ ಮಂಡಳಿಯನ್ನು ಸದಸ್ಯರ ಜನಾವಣೆಯು ಆಗಬೇಕಾಗಿದೆ

2. ಮೆಂಬರುಗಳು.

ಈ ವರ್ಷ ಮೊರ್ಚಿ ತಿಂಗಳ 31ರಲ್ಲು ರಿಜಿಸ್ಟರಿನ ಮೇರೆ ಮೆಂಬರುಗಳ ಸಂಖ್ಯೆಯು 3551 ಇತ್ತು. ಆದರ ಕಳೆದ ಎರಡುವರ್ಷಗಳ ಚಂದಾ ಕೊಟ್ಟವರು 1480 ಮಿತ್ರ ಇದ್ದರು. ಕಳೆದ ವರ್ಷ ಮೊರ್ಚಿ ಅಖೈರಿನಲ್ಲು 157 ಇದ್ದರು. ಕಳೆದ ವರ್ಷದಂತೆಯೇ ಈ ಸಾಲಿಯೂ 5ನೇಯು ನಿಲ್ಲಿಂದಿನೆ ಮೇರೆ ಒಟಿಗೆ ಅರ್ಹರಾದ ಇವರಿಗೆ ಮೊತ್ತಿ ಜನರಲ್ ವಿಷಯಿನ ನೋಟೀಸು ಕಳುಹಿಸಲಾಗಿದೆ. ಈವರ್ಷತಿಯ ಚಂದಾ ವಸೂಲಾತಿಗೆ ಸಹಾಯ ಮಾಡುತ್ತಿದೆ ವಾರ್ಷಿಕ ಚಂದಾ ವಸೂಲಾತಿ ಬಗ್ಗೆ ತಾ. 19—1—29ರಕಮಿಟಿ ಮೀಟಿಂಗಲ್ಲಿ 13 ಆರ್ಗನೈಜರುಗಳು ನೇಮಿಸಲ್ಪಟ್ಟರು. ಇವರ ವಸೂಲಾತಿಯ ಪಟ್ಟಿಗಳಲ್ಲೂ ಇನ್ನೂ ಅಧೀಸು ಬಂದು ತಲಪದಿರುವದರಿಂದ ಅದರ ಲೆಖ್ಖವನ್ನು ಈಗ ಹೇಳುವಾದ್ಯವಿಲ್ಲ ಆದರ ಕಳೆದ ವರ್ಷಕ್ಕಿಂತ ಉತ್ಸಮವಾಗಬಹುದೆಂದು ತೀರ್ಮಾನಿಸುತ್ತದೆ ಸಂಘದ ಅವಶ್ಯಕತೆ ಮತ್ತು ಅನಿವಾರ್ಯತೆಯ ಬಗ್ಗೆ ಜನರಿಗೆ ತಿಳಿಯುವಂತೆ ಮಾಡಬೇಕಾದರೆ ಕಾರ್ಯಕಾರಿ ಮಂಡಳಿಯವರು ಸಂಘದ ಪ್ರದೇಶಗಳ ಪ್ರಮುಖ ಆರ್ಗನೈಜರುಗಳ ಕೆಲಸಗಳಿಗೆ ಹೆಚ್ಚಿನ ಸಹಾಯವನ್ನು ಮಾಡಬೇಕಾದ ದೇಶದ ರಾಜಕೀಯ ತಾಗಿನ ಪರಿಸ್ಥಿತಿಯಲ್ಲಿ ಅಹರ್ನಿಶವಾಗಿ ಸಂಘದ ಮೆಂಬರಾಗದೆ ಇದಂತೆ ಮಾಡುವದಾಗಿನ ಮೆಂಬರುಗಳ ಕರ್ತವ್ಯವಾಗಿದೆ

3. ಆದಾಯ ವೆಚ್ಚ.

ಸಂಸ್ಥೆಯಲಸದ ವರದಿಯು ಮೊರ್ಚಿ ಅಖೈರು ತಿಂಗಳಿಗೆ ಇರುವದಾಗಿ, ಆಡಿಟ್ ಅನುಕೂಲತೆಗಾಗಿ 1927ರಿಂದ ಕ್ಯಾಲೆಂಡರ್ ವರ್ಷವು ಲೆಖ್ಖಿದ ವರ್ಷವಾಗಿ ಎಣಿಸಲ್ಪಟ್ಟಿತ್ತಿದೆ ಕಾರ್ಯಕಾರಿ ಮಂಡಳಿಯಿಂದ ನೇಮಿಸಲ್ಪಟ್ಟ ಮೆ. ಬಿ ಶಿಕ್ಯಮನ್ನಾಯಿ 1928ನೇ ವರ್ಷದ ಲೆಖ್ಖವನ್ನು ಆಡಿಸಿಯು ಸಿ ಚೆಕ್ ತೆರವರು ಅವರ ಆಡಿಟ್ ರಿಪೋರ್ಟಾನಂತರ ಒದಗಿಸಿದರು 17ನೇ ಅಧಿವೇಶನದಿಗೆ ಮೇರೆ ಮೆ. ಪುಲಿಯಂಬಾಪತ್ಯಿಯವರು ಮತ್ತು ಮೆ. ಯಂ ಪೀಂಗಿಣಪ್ಪನವರು ಲೆಖ್ಖ ಪರಿಶೋಧನೆ ಮಾಡಲು ಸೇರಿಸಲ್ಪಟ್ಟಿದ್ದರು ಲೆಖ್ಖಪರಿಯನ್ನು ಅಲಾಯಿದ ಹಿಮ್ಮಟ್ಟಿನೆ. 1928 ರಲ್ಲಿ ಆದ 1432—9—5 ರಿಂದ 1927ರ ಶಿಲ್ಕು ಬಾಕಿ 177.6-8 ಒಟ್ಟಿಗೆ ಆದ 1705—0—1. ಖರ್ಚು 2009—3—2 ಬಾಕಿ ಶಿಲ್ಕು 1112—11 ಇದರಲ್ಲಿ 1100 ಬ್ಯಾಂಕಿನ್ಲ್ಲಿದೆ ಈ ವರ್ಷದಾಯದಲ್ಲಿ 900 ರೂ. ಕಟ್ಟಿದ ಫಂಡಿನಾಗಿದೆ. ಬಡ್ತಿಟು ವರ್ಷದ ಆದಾಯ ವೆಚ್ಚವನ್ನು ಗಣಿಗೆ ತೆಗೆದುಕೆಂಡ ಖರ್ಚು 576—9—9 ಉತ್ಪತ್ತಿಗಿಂತ ಹತ್ತಾನಿದೆ ಖರ್ಚದಲ್ಲಿ ಚಂದಾ ವಸೂಲಾತಿಯು ಆಸ್ಪಾಂದ. ತೃತ್ತಿಲ್ಲದ್ದರಿಂದಲೂ, ಸ್ವಯಂಸೇವಕರ ತರಬೇತಿಗೆ 175—0—0 ಗಳೆದ ಅಧ್ಯಕ್ಷರ ಪ್ರಯೋಜಕತ್ವ 117 0, ಗಣಪತಿ ಲೈಬ್ರರಿ ಸಾಮಾನುವಿಕೆಗೆ 54-5-0, ರಾಜಕೀಯಜ್ಞಾನ ಪ್ರಚಾರಕ ಕವಿಟಿಯ ಪ್ರಯಾಣಾ ಬತ್ಯಕ್ಕೆ 12—0, ಮೊದಲಾದ ಹೊಸ ಖರ್ಚುಗಳ ದೆಸೆಯಿಂದಲೂ 280ರಲ್ಲಿ ನಷ್ಟವಾಗಲು ಕಾರಣವಾಯಿತು ಇದು ನಿಜವೂ ನಷ್ಟವೆಂದು ಎಣಿಸಲಾಗದು ಯಕೆಂದರೆ—ಹೊಸದರಲ್ಲಿ ನಷ್ಟವಾಗಿ ಕಂಡು ಒಂದರೂ ರಚನಾ ಪ್ರತಿಫಲದಿಂದಲೂ, ಸ್ವಯಂ ಸೇವಕರ ತಯೆತಿನಿಂದಲೂ ತುಂಬಾ ಪ್ರಯೋಜನ ಉಂಟಾಗಿದೆ ಆದರೆ ಇದಕ್ಕಾಗುವಾದ ಖರ್ಚುಗಳನ್ನೆಲ್ಲಾ ಧರ್ಮ ಖಾತೆ ಮತ್ತು ಜನರಲ್ ಖರ್ಚುಗಳಲ್ಲಿ ತೋರಿಸಿರುವದು ಬೇಕಾಗಿದೆ

4 ರಚಿತ ಪುಸ್ತಕಗಳು.

ಕೃಷ್ಣವರ ತೀರ್ಥೋದ ಮೇರೆ ರಾಜಸ್ವರ್ ಸೊಟೀಸು ಮೆಟ್ಟು ಎಷ್ಟು ತಗಾಸಿದರೂ ಕೂಡ 1924ಮತ್ತು 1925 ಚಂದಾ ವಸೂಲಾತಿಗೆ ಕೊಟ್ಟ 33 ರಚಿತ ಪುಸ್ತಕಗಳಲ್ಲಿ 926ರಲ್ಲಿ ಕೊಟ್ಟ 2 ಪುಸ್ತಕ, 1927ರಲ್ಲಿ 1, ಒಂದು ತಿಳಿಗಲು ಗೆಜ್ಜಲು ತಿಂದು ಹೋದದಮೆದು ವಾಪಸು, ಕೆ ವಾಪತಿಯಿಂಗಷ್ಟರಿಂದಲೂ, ಅವುಗಳನ್ನು ವಸೂಲಿ ಬೆ ದಾರಿ ಯಾವದೂ ಇಲ್ಲದ್ದರಿಂದಲೂ ಮಿಟಿಯವರ್ಷಗಳನ್ನು ವಜ ಮಾಡಿರುವದು. 1927ಲ್ಲಿ

ನೇ ಪುಟದಲ್ಲಿ ಮುಂದುವರಿದಿದೆ)

ಸ್ವಾಗತ ಅಧ್ಯಕ್ಷರ ಭಾಷಣ.

ಪೊನ್ನಂಪೇಟೆಯಲ್ಲಿ ನಡೆದ ಜಮಿನ್ದಾರರ ಸಂಘದ ಸ್ವಾಗತ ಮಂಡಳಿಯ ಅಧ್ಯಕ್ಷರಾಗಿದ್ದ ಮೆ. ಜಮ್ಮಡ ಮಾದಪ್ಪ ನವರ ಭಾಷಣ.

ಸಭಾ ಮಹಾನೀಯರೇ,

ಭಾರತ ಭೂಮಿಯು ಬ್ರಿಟಿಷರ ಆಳಿಕೆಗೆ ಸಿಕ್ಕಿದಂದಿನಿಂದ ಪ್ರಜೆಗಳ ಮೂಸಿಕ, ದೈವಿಕ, ಸಾಮಾಜಿಕ, ಸಾಂಪತ್ತಿಕ ಸ್ಥಿತಿ ಗಳನ್ನು ಮೂಲೆಗೊತ್ತಿ ಅವರನ್ನು ಪ್ರಾಣಾಗಳೋಪಾದಿಯಲ್ಲಾ ಕಾಣುತ್ತಿರುವದನ್ನು ಪೂರ್ಣ ಮನವರಿಕೆಗೆ ತಂದ ದೇಶಮಾನ್ಯ ರಾದ ದಾದಾಬಾಯಿ ನವರೋಜಿ, ಬಾಲಗಂಗಾಧರ ತಿಲಕರೇ ಮೊದಲಾದ ಅನೇಕ ದೇಶಭಕ್ತರು ದೇಶಸೇವೆಗೆ ತಮ್ಮ ಜೀವ ವನ್ನೇ ಅರ್ಪಿಸಿದರು. ಅವರು ಹಿಡಿದ ಕಾರ್ಯವನ್ನು ಈಗ ಮೂಲೆ ಮೂಲೆಗಳಲ್ಲಿ ಸರ್ವ ಜನರ ತಿಳುವಳಿಕೆಗೆ ಆಗಾಗ್ಗೆ ತ ರುತ್ತ, ರೋಗದಿಂದ ಪೀಡಿತರಾಗಿಯೂ, ಹೊಟ್ಟೆಗೆ ಸರಿಯಾಗಿ ಅನ್ನವೂ, ಮೈಗೆ ಸರಿಯಾಗಿ ಬಟ್ಟೆಯೂ ಇಲ್ಲದೆಯೂ ನರಳು ತ್ತಿರುವ ಭಾರತ ಭೂಮಿಯ ಮೂವತ್ತೈದು ಕೋಟಿ ಜನರ ನೆ ಲುವಾಗಿ ಹರಿಜನರು ಅಲೆಯುತ್ತಿರುವ ಲೋಕ ಪ್ರಖ್ಯಾತರಾದ ಮಹಾತ್ಮ ಗಾಂಧಿಯವರ ಕೆಲಸವನ್ನು ನಾವು ಸದಾ ಕೇಳು ತ್ತಿರ ತ್ತೇವೆ. ಇವರನ್ನು ಹಿಂಬಾಲಿಸಿ ನಡೆಯುವ ಎಷ್ಟೋ ದೇಶೋದ್ಧಾರಕರು ಸಂಘ ಸಂಸ್ಥೆಗಳಲ್ಲೂ, ಕೌನ್ಸಿಲುಗಳಲ್ಲಿಯೂ ಬ್ರಿಟಿಷರ ಆಳಿಕೆಯ ಫಲಿತಾಂಶವನ್ನೂ, ಅವರು ಭರತ ಖಂಡ ಕ್ಕೆ ಮಾಡುತ್ತಿರುವ ಅನಿಷ್ಟ ಕಶ್ಚನಷ್ಟಗಳನ್ನೂ ಖಂಡಿಸುತ್ತಾ ಸ್ವ ರ್ಗತ್ಯಾಗಿಗಳಾಗಿ ಅರಮನೆ, ಡೈಲು ಎಲ್ಲವನ್ನೂ ಬಂದೆ ಯಂತೆ ಕಾಣುತ್ತಿರುವದು ನಾವು ಯಾವಾಗಲೂ ಕೇಳುತ್ತಿರು ತ್ತೇವೆ.

ಹೀಗೆಯೇ ನಮ್ಮ ದೇಶವನ್ನು 1834ನೇ ಸೆಂವತ್ಸರದಿಂದ ಬ್ರಿಟಿಷರ ಆಳಿಕೆಗೆ ಬಿಟ್ಟುಕೊಟ್ಟಂದಿನಿಂದ ನಮ್ಮನ್ನು ಎಷ್ಟೋ ಅಧೋಗತಿಗೆ ಇಳಿಸುತ್ತಿರುವದನ್ನು ಕಂಡು ಕೇಳಿದ ಹಿರಿಯೇಳು ವರ್ಷಗಳಿಂದ ಈ ಜಮಿನ್ದಾರರ ಸಂಘದ ಮೂಲಕ ಜನರ ತಿಳುವಳಿಕೆ ಬಗ್ಗೆ ಅಲ್ಪಲ್ಪ ಪರಿಷತ್ತುಗಳನ್ನು ನಡೆಸುತ್ತಿರುವೆವು. ಇಂಥಾ ಸಮ್ಮೇಳನವನ್ನು ನಡೆಸಲು ಬಡ ಜಮಿನ್ದಾರರಾದ ನಮ್ಮ ಈ ಭಾಗದವರು ಪೂರ್ಣ ಗಾತ್ರಮವಾಸಗಳಾಗಿಯೂ, ಸರಿಯೂದ ವಿದ್ಯೆಯು ಇಲ್ಲದಿರುವದರಿಂದಲೂ ತಮ್ಮನ್ನೆಲ್ಲಾ ಇಲ್ಲಿ ಕರೆಸಿ ತಕ್ಕ ಸತ್ಕಾರ ಮಾಡಲು ಅನೇಕ ತೊಂದರೆಗಳಿ ದ್ದರೂ, ಸ್ವತಂತ್ರದ ಹೆಂಬಲಿಕೆಗಾಗಿ ತೊಂದರೆಗಳನ್ನೆಲ್ಲಾ ದೂ ರಕ್ಕಿಟ್ಟು ತಮಗೆಲ್ಲಾ ಸುಸ್ವಾಗತವನ್ನೀಡಿದ್ದಾಗಿದೆ. ದೇಶದ ಕಲ್ಯಾಣಕ್ಕಾಗಿ ಬಂದ ನೀವು ಅಂಥಾ ತೊಂದರೆಗಳನ್ನೆಲ್ಲಾ ಮರೆತು ನಮ್ಮನ್ನು ಕೃವಿಸುವಿರಾಗಿ ಸ್ವಾಗತಮಂಡಳಿಯ ಪ ರವಾಗಿ ತಮ್ಮನ್ನೆಲ್ಲಾ ಕೋರುತ್ತೇನೆ.

ಇಂಥಾ ಸ್ವಾತಂತ್ರ್ಯದ ಹೋರಾಟದಲ್ಲಿ ಭರತ ಭೂಮಿ ಯ ಎಷ್ಟೋ ವೀರ ಪುತ್ರರು ಮೃತ್ಯ ಭೂಮಿಯನ್ನು ಅಗಲಿ ದಂತೆ ನಮ್ಮ ಈ ಸಂಘದ ಅಧ್ಯಕ್ಷರಾಗಿಯೂ, ಕೌನ್ಸಿಲಿನ ಒಬ್ಬ ಮೆಂಬರಾಗಿಯೂ, ಇನ್ನೂ ದೇಶದ ಅನೇಕ ಕಾರ್ಯಕ ಲಾಪಗಳಲ್ಲಿ ಪ್ರಮುಖರಾಗಿಯೂ ಇದ್ದ ಶ್ರೀಮಾನ್ ವಾರು ವಂಗದ ಕುಶಲಪ್ರವೀಣರನ್ನು ನಮ್ಮ ದೇಶದವರು ಕಳಕೊಂಡ ದ್ದಕ್ಕೆ ತುಂಬಾ ವ್ಯಸನ ಪಡಬೇಕಾಗಿದೆ ಅವರ ಅಸ್ಥೊಂದು ಸಣ್ಣ ವಯಸ್ಸಿನಲ್ಲಿ ಅವರ ದೇಶದ ಹಾಗೂ ಜನರ ಮೇಲಿನ ಮಮತೆ, ನಿಷ್ಕಲ್ಕ್ಮವಾದ ಕೆಲಸ, ಸರಳ ಹೃದಯ, ಸಮರ್ಥಾನ ದ ಮತ್ತು ಜನರನ್ನೆಲ್ಲಾ ಪ್ರೀತಿಸುವಂತಾದ್ದಾಗಿತ್ತು. ಅವ ರ ಅಗಲುವಿಕೆಯಿಂದ ದೇಶದ ಹಾಗೂ ಕರ್ನಾಟಕದ ಒಬ್ಬ ಸುಪುತ್ರರನ್ನು ಕಳಕೊಂಡದಾಯಿತು.

ಬ್ರಿಟಿಷರ ಆಳಿಕೆಗೆ ನಮ್ಮ ದೇಶವನ್ನು ನಾವಾಗಿ ಬಿಟ್ಟು ಕೊಟ್ಟದ್ದಾಗಿದೆ. ಆಂದಿನಿಂದ ನಮ್ಮ ದೇಶದ ಸಾಂಪತ್ತಿಕ, ಸಾಮಾಜಿಕ, ದೈವಿಕ ಪರಿಸ್ಥಿತಿಯು ಸಡಿಲವಾಗುತ್ತಾ ಒಂದು ಈಗ ಬರೇ ದರಿದ್ರಾವಸ್ಥೆಯಲ್ಲಿರುವುದನ್ನು ನಾವೆಲ್ಲರೂ ಕಾ ಣುತ್ತಲೂ, ಅನುಭವಿಸುತ್ತಲೂ ಇದ್ದೇವೆ ದೇಶದ ಜನಸಂ ಖ್ಯೆಯು ದಿನೇ ದಿನೇ ಕಮ್ಮಿಯಾಗುತ್ತಾ ಕೆಲವು ವರ್ಷಗಳಲ್ಲಿ ದೇಶವು ನಿರ್ಜನ ವ್ರದೇಶವಾಗಲೂ ಬಹುದು. ಆದರೆ ದೇ ಶವನ್ನು ಬಿಳೀ ಜನರು ತಮ್ಮ ಒಂದು ಉದ್ಯಾನ ವನವನ್ನಾಗಿ ಟ್ಟುಕೊಳ್ಳಬೇಕೆಂಬ ಇರಾದೆಯು ಕೈಗೂಡುತ್ತದೋ ಎಂಬ ಸಂ ಶಯಕ್ಕೆ ತುಂಬಾ ಎಡೆ ಇರುವ ಹಾಗೆ ಕಾಣುತ್ತೆ. ನಾವು ದರಿದ್ರರಾಗಲಿಕ್ಕೆ ಹಲವು ಕಾರಣಗಳಿವೆ. ಈ ಕಾರಣಗ ಳೆಲ್ಲಾ, ಇವುಗಳಿಗೆ ಕಾರಣರಾದ ಸರಕಾರದವರಿಂದಲೇ ನಿವೃ ತ್ತಿಯೊಗಬೇಕಾಗಿದೆ. ಹಲವು ಕಾಯಿಲೆಗಳಿಂದ ಪೀಡಿತರಾಗಿ ನಾಯುತ್ತಿರುವವರನ್ನು ತಡೆಯಲಿಕ್ಕೆ ತಕ್ಕಷ್ಟು ಆಸ್ಪತ್ರೆಗಳಿಲ್ಲ ಟ್ಟು ಹಣ ಖರ್ಚು ಮಾಡಬೇಕಾಗಿದೆ. ಈಗ 100 ಸಾವಿರ ಜನರ ಆರೋಗ್ಯಕ್ಕೆ ಬರೇ ಒಂಟು ಲಕ್ಷ ರೂಪಾಯಿ ಖರ್ಚು ಮಾಡುವದಾಗಿದೆ.

ಫಾರೆಸ್ಟು ಇಲಾಖೆಯನ್ನಿಟ್ಟು, ನಾಲ್ಕೈದು ಲಕ್ಷ ರೂ ಪಾಯಿ ಉಪ್ಪತ್ತಿಯಾಗುವ ಕಾರಣರೂ ಮಾಡುವರೆ ಲಕ್ಷ ರೂಪಾಯಿ ಖರ್ಚಿನಿಂದ ನಡೆಸಿ ಏನೂ ಪ್ರಯೋಜನವಿಲ್ಲದಂತೆ ಕ್ರಮವನ್ನಿಟ್ಟು ರುತ್ತಾರೆ. ಇಂಜಿನೀಯರಿಂಗ್ ಇಲಾಖೆಯು ಮೂರುಮುಕ್ಕಾ ಲು ಲಕ್ಷ ರೂಪಾಯಿಯನ್ನು ನುಂಗಿದರೂ ಸುರಕ್ಕಿ ಕವಾದ ರಕ್ಕೆಗಳಲ್ಲದೆಯೂ, ಉತ್ಪತ್ತಿಯನ್ನು ತೋರಿಸುವ ಇತರ ಚಾ ತುರ್ಯದ ಕಾರ್ಖಾನೆಗಳೇನೂ ಇಲ್ಲದೆಯೂ ಇರುವದನ್ನೂ, ಗಾಡಿಗಳು ಸೋಗಲಿಕ್ಕೂ ಸರ ಹೆದರಿಕೆಯೂಗುವ ಸೇತುವ ಗಳಿರುವದನ್ನೂ ನಾವು ಕಾಣುತ್ತೇವೆ.

ದೇಶದ ಆರ್ಥಿಕ ಸ್ಥಿತಿಯನ್ನು ವೃದ್ಧಿಗೆಳೆ ವಾರವನ್ನು ಹೆಚ್ಚಿಸಲಿಕ್ಕೂ ಒಂದು ರೈಲ್ವೆ ಇಲ್ಲ. ವ್ಯಾ ಬರೇ ಜಮಿನ್ದಾರರ ಧಾನ್ಯಗಳನ್ನು ನ್ಯಾಯವಾದ ಕ್ಕೆ, ಖು ಳಿಕೆಯಿಂದ ಮೂಲಕ್ಕೆ ಅನುಕೂಲಪಡಿಸಲಿಕ್ಕಾಗಿ ಗಮನ ಕೊಡುವದಿಲ್ಲ. ಏಲ್ಲಿಗೆ ಏನು ಬರ್ಜ ಮಾಡಿ ರುತ್ತಾರೆ ನೋಡಿ. ಬರೇ ಸೌರ್ವಭೌಮಸಾರಿ ರೂಪಾಯಿ ಆದರೆ ಆಬ್ಕಾರಿಯಿಂದ ಸಿಕ್ಕುವ ಉತ್ಪತ್ತಿಯು ಮೂರು ಲಕ್ಷ ಅರುವತ್ತು ಸಾವಿರ ಚಿಲ್ಕ. ಹೈಸ್ಕೂಲ್ ಬೇಕು, ಕಾಲೇಜು ಬೇಕು ಎಂದರೆ ಹಣವೆಲ್ಲಿಂದ ಅನ್ನುತ್ತಾರೆ. ಜನರ ದುರ್ಗು ಣವಾದ ಕುಡುಕುತನದಿಂದ ಸರ್ಕಾರದವರು ದೊಡ್ಡ ಉತ್ಪತ್ತಿ ನೋಡಿಕೊಳ್ಳುತ್ತಿದ್ದಾರೆ. ಅದಕ್ಕೆ ಸರಿಯಾಗಿ ದೇಶದ ಕೆಲವು ಪ್ರತಿನಿಧಿಗಳು ಸಹ ದೇಶದ ಜನರು ಕುಡುಕುತನದಲ್ಲಿ ನಿರತ ರಾಗಿರುತ್ತಾರೆಂಬ ತಪ್ಪಭಿಪ್ರಾಯವನ್ನು ಹರಡುತ್ತಿರುತ್ತಾರೆ. ಜೆನ್ನಾಗಿ ನೋಡಿದರೆ ಸರ್ಕಾರದವರು ವಿದ್ಯೆಗಾಗಿ ತಲೆ ಒಂದ ರ 1 ರೂ. ಗಿಂತ ಕಮ್ಮಿಯಾಗಿಯೂ, ಔಷಧಿಗಾಗಿ ಬರೇ 8 ಆಣೆಯನ್ನೂ ವಾರ್ಷಿಕ ಖರ್ಚು ಮಾಡುತ್ತಾರೆ. ಇದರಲ್ಲಿ ಇಲಾಖೆಯ ಸಿಬ್ಬಂದಿ ಖರ್ಚು ಸಹ ಕೂಡಿದೆ. ,ಅಬ್ಕಾರಿ ಇ ಲಾಖೆಗೆ ತಲೆ ಒಂದರ 2—4—0 ತೆರುತ್ತಾರೆ. ಭೂಕಂದಾ ಯಕ್ಕೆ ಸರಿಯಾಗಿ ಉತ್ಪತ್ತಿಯಾಗುವ ದೇಶದಲ್ಲಿ ಬಡ ತನ ಎಷ್ಟರ ಮಟ್ಟಿಗೆ ವೇಗದಿಂದ ಮುಂದುವರಿಯುವುದು ಎಂ ಬದನ್ನು ತಾವೆಲ್ಲರೂ ನೋಡಬಹುದು. ಹಲವು ವರ್ಷಗ ಳಿಂದ ರಸ್ತೆ ಸೇತು-ದೆಗಳಿಗಾಗಿ ಹೋರಾಡುತ್ತಿರುವ ಮರೆನಾ ಡು ಮತ್ತು ಬಾಳೆಲೆಗೆ ಒಂದೊಂದು ಸಾರಾಯಿ ಅಂಗಡಿಯ ನ್ನು ದಯಪಾಲಿಸಿದ್ದಾರೆ. ಹೀಗೆಯೇ ದೇಶದ ಇನ್ನು ಬೇರೆ ಎರಡು ಕಡೆಗಳಲ್ಲೂ ಸಹ ಎರಡು ಅಂಗಡಿಗಳನ್ನು ಹೆಚ್ಚಿಸಿ ದ್ದಾರೆ. ಗೋಳಕಡುತ್ತಿರುವ ಪ್ರಜೆಗಳಿಗೆ ಇದೇ ಸರ್ಕಾರ ದ ಬಹುವರ್ಷ!

ನ್ಯಾಯಟೀಫ್ಗಿನ ಇಲಾಖೆಯನ್ನೂ ಆಡಳಿತ ಇಲಾಖೆಯ ನ್ನು ಬೇರ್ಪಡಿಸಬೇಕೆಂದೂ, ಗಜೆಟೆಡ್ ಉದ್ಯೋಗಸ್ಥರ ವ ರ್ಗಾವರ್ಗ ಮೂಸಬೇಕೆಂದೂ ಬಹು ವರ್ಷಗಳಿಂದ ದೇಶದಲ್ಲಿ ಜಳಪಳ ನಡೆಸಿದರೂ ಸರ್ಕಾರದವರು ಗಮನ ಕೊಡದಿರುವದು ದೇಶದಲ್ಲಿ ತುಂಬಾ ಅಸಮಾಧಾನವನ್ನುಂಟುಮಾಡುತ್ತಿದೆ. ನವ ಮಾತ್ರಕ್ಕೆ ಕೊಟ್ಟ ಕೌನ್ಸಿಲಿನಲ್ಲು ಜನರ ಪ್ರತಿನಿಧಿಗಳು ಎಷ್ಟು ಮೊರೆಯಿಟ್ಟರೂ ಸ್ಪಯೋಜನವಿಲ್ಲ.

ಮಹಾಶಯರೇ, ಮೇಲ್ಕಂಡ ಸಂಗತಿಗಳಿಂದ ಉಗಿನ ಆಡಳಿತದಲ್ಲಿ ಪ್ರಜೆಗಳು ಯಾವ ತರಹದ ಹೀನಾವಸ್ಥೆಗೆ ಇಳಿಯು ತ್ತಿದ್ದಾರೆಂಬುದು ತಿಳಿಯುವದು. ದೇಶದ ಅಭಿವೃದ್ಧಿಗೆ ಹ ಣವಿಲ್ಲವೆನ್ನುವರು. ಉಳುವವನಿಗೂ ಉಂಡುಹೊಲ್ಲು ಸಮ ರು ಬೆದು ಕೋಟಿ ರೂಪಾಯಿಯನ್ನು ಪಾಪಸು ಕೊಡಿ ಎಂದರೆ ಜವಾಬಿಲ್ಲ. ತಲೆಭಾರ ಸರ್ಕಾರ ಬೇಡವೆಂದರೆ ಆ ಮೂ ತ್ಪತ್ತಿಬೇಡವೆನ್ನುವಹಾಂತು.

ಇಂಥಾ ದುಸ್ಥಿತಿಯನ್ನುಂಟು ಮಾಡುವ ಆಡಳಿತವು ನಡೆ ಯುವಲ್ಲು ಹಿಂದುಸ್ಥಾನವು ಘಂಟಾಘೋಷವಾಗಿ ನೆಸರು ಕಮಿಟಿಯವರು ತಯಾರಿಸಿದ ವರದಿಯಲ್ಲಿರುವ ಮೂಗಾಡು ಗಳುಳ್ಳ ಆಡಳಿತ ವಿಸಹ ಕ್ಕೇಮವಿಲ್ಲವೆಂದು ನೆರ್ವ ಪಕ್ಷದವ ರೂ ಕೂಡಿ ಆದಕ್ಕೆ ಒತ್ತಾಸೆ ಕೂಟ್ಟಿರುವರು. ಹಾಗೆ ಯೇ ನಾವೂ ನಮ ನಮಗೆ ಈ ತರಹದ ಆಡಳಿತ ಬೇಕೆಂದು ಒಂದು ರಚನೆಯನ್ನು ದೇಶದ ಸರ್ವ ಕೋಮಿನವರೂ ಕೂಡಿ ರ.ವ ಈ ಸಂಘವು ತಯಾರಿಸಿ ದೇಶದಲ್ಲೂ, ಕೌನ್ಸಿಲಿನಲ್ಲೂ ನಮ್ಮ ತಿಪಡಿದಿರುವದು ನಮಗೆಲ್ಲರಿಗೂ ತಿಳಿಯದಲ್ಲ. ಆಂ ಥಾ ರಚನೆಗೆ ಕಮ್ಮಿಯಾಗುವ ಯಾವ ತರಹದ ಮೂರ್ಖಾಡಿಗೂ ನಮ್ಮ ದೇಶದವರು ಸಮ್ಮತಿಸುವಾರೆಂದು ದೇಶವರಲ್ಲಿ ಸಂ ಘವು ಪುನಹ ಕೇಳಿಕೊಳ್ಳಬೇಕಾಗಿದೆ.

ಇಂಥಾ ಸಂದರ್ಭದಲ್ಲಿ ಹಿಂದೂಸ್ಥಾನದವರು ಹೆಚ್ಚಿನ ಸಹಕಾರಕ್ಕೆ ಯೋಗ್ಯರೋ ಎಂಬುದನ್ನು ವಿಚಾರಿಸಿಲಿಕ್ಕೆ ಇಂ ಗ್ಲೆಂಡಿನಿಂದ ಸೈಮನ್ನರೇ ಮೊದಲಾದ ಸಜ್ಜನರು (ಹಿಂದೂ ಸ್ಥಾನದ ವಿಷಯ ಏನೂ ತಿಳಿಯದ ಇತರರು) ಇಂಡಿಯಕ್ಕೆ ಎಡತಾಪ್ಪಿ ಬಂದಾಗ ಅವರು ಹೋದ ಕಡೆಗಳಲ್ಲೆಲ್ಲಾ ಭರತ ಖಂಡದ ಪ್ರಜೆಗಳು ಅವರಿಗೆ ಬಹಿಷ್ಕಾರ ಹಾಕಿದವು. ಹಾ ಗೆಯೇ ನಾವೂ ಸಹ ಕೌನ್ಸಿಲಿನಲ್ಲೂ ಮಕ್ಕು ದೇಶವಲೆಲ್ಲಾ ಮೂಟೆಂಗುಗಳನ್ನು ಮಾಡಿ ಬಹಿಷ್ಕರಿಸಿವೆ. ನಮ್ಮ ದೇಶದ ಲ್ಲಿ ಈ ಬಹಿಷ್ಕಾರದ ಚಳವಳವು ಹಿಂದೂದೇಶದ ಅನೇಕ ಭಾ ಗಗಳಿಗಿಂತ ಹೆಚ್ಚಿನ ಜಯಪ್ರದವಾಗಿ ನಡೆಯುತಿದು ಹೇಳಲು ಏನೂ ಅಭ್ಯಂತರವಿಲ್ಲ. ಭರತ ಖಂಡದ ಆಡಳಿತ ಕೃವನ ನ್ನು ನಿರ್ಣಯಿಸುವ ಪಕ್ಕ ಭಾರತೀಯರಿಗಲ್ಲದೆ ಪರಕೀಯರಿ ಗಿಲ್ಲವೆಂಬುದೇ ಈ ಬಹಿಷ್ಕಾರದ ಉದ್ದಿಶ್ಯವಾಗಿದೆ. ಸೈಮನ್ನ ರು ನಮ್ಮ ದೇಶಕ್ಕೆ ಬರುವಂತಿರಲಿಲ್ಲ. ಆದರೂ ಸೆಸ್ಸ್ಕರನ್ನಿ ಆರಿಕೆಮಾಡಿಕೊಳ್ಳಲಿಕ್ಕೆ ನಮ್ಮಲ್ಲು ಒಂದು ಕೋಮಿನ ಕೆಲವ ರು ತಮ್ಮ ಅಧಿಸ್ಯಾಯನನ್ನು ಕೊಡಲಿಕ್ಕೆ ಹೋಗಿದ್ದರು. ನಾವಾಗಿ ಬಿಟ್ಟುಕೊಟ್ಟ ರಾಜ್ಯವನ್ನು ವೀರಪುರುಷರಂತೆ ಬ ಗ್ಗಟ್ಟಾಗಿ ಮರಳಿ ಪಡೆಯಲು ಪ್ರಯತ್ನಿಸುವದನ್ನು ಬಿಟ್ಟು ಕೆ ಲವರು ದೇಶೀಯರ ಅಧಿಸ್ಯಾಯತೆಗೆದುಕೊಳ್ಳಲಿ ಮನಬಂದಂ ತೆ ವರ್ತಿಸಿದ್ದಕ್ಕೆ ದೇಶವು ವಿಷಾದಿಸಲೇಕಾಗಿದೆ.

ನಾವು ಕೇಳುವ ರೀತಿಯ ಸ್ವಾತಂತ್ರ್ಯವನ್ನು ಸಂಸಾರಿ ಸಲಿಕ್ಕೂ, ಆ ಮೂಲಕ ನಮ್ಮ ದಂದಾತ್ಮವನ್ನೆಯನ್ನು ನೀಗಿಸಿ ಕೊಳ್ಳಲಿಕ್ಕೂ, ನಮ್ಮ ಮಾನಸಿಕ, ದೈವಿಕ ಶಕ್ತಿಯನ್ನು ಪೂರ್ಣ ಹೊಂದಲಿಕ್ಕೂ, ನಮ್ಮಲ್ಲಿಗೆ ಪೂರ್ಣ ಜಗ್ಗುಬ್ಬನ್ನು ಚಿಮ್ಮಿ ಸುವ ಕ್ಕೂ, ನಮ್ಮ ರಾಷ್ಟ್ರಿಯತ್ವದ ಧ್ವಜವನ್ನು ವಿಶ್ವದಲ್ಲಿ ಹಿಂ ದೂಸ್ಥಾನೀಯ ಮಹಾಸಭೆಯು ತೆಲವು ಮುಖ್ಯ ಸಂಗತಿಗಳನ್ನು ಮುಂದಿಟ್ಟು ಆ ಮೂಲಕ ತೆಲಸಮೂಡು ತ್ತಿರುತ್ತದೆ. ನೀವು ನಾವು ಸಭ ಈ ಸಂಘದ ಮೂಲಕ ಆ ಕಾರ್ಯ ಗಳನ್ನು ಕೊಂಡು ಇಷ್ಟರ ವರೆಗೆ ಸ್ವಲ್ಪ ಸ್ವಲ್ಪವಾ ಮೂಡುತ್ತಿರುವೆವು. ಪೂರ್ಣಾವಸ್ಥೆಗೆ ಕಂದಲ್ಲ ನಾವು ಸ ಕರ್ನಾಟಕವೆಲ್ಲಾ ಭಾರತ ಮಾತೆಯ ವೀರಪುರುಷ ಸಿಕೊಳ್ಳುತ್ತೆ.

ಆಂಧ್ರಾವು, ವೆಂದರೆ—ಬಾಡಿ ಧರಿಸುವಿಕೆ, ಪ ರದೇ ಬಟ್ಟೆ ವೆಂದರೆ—ಬಾಡಿ ಧರಿಸುವಿಕೆ, ಅಸ್ಪೃ ಶ್ಯತೆಯನ್ನು ಸುಧಾ ನಿವಾರಣೆಯಾಗ

ಕೊಂಡರು. ಆದುದರಿಂದ ಮೆ. ಸಿ. ಯಸ್. ವೆಂಕಯ್ಯ ಬಿ. ಎ. ಬಿ. ಎಲ್., ಯಂ. ಎಲ್. ಸಿ. ಯವರು ಸರ್ವಸಮ್ಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಎರಡು ಉಪ ಅಧ್ಯಕ್ಷರ ಪದವಿಗಳಿಗೆ ಮೆ. ಯನ್. ಆರ್. ಸುಬ್ರಹ್ಮಣ್ಯಯ್ಯನವರ ಮತ್ತು ಮೆ. ಕೆ. ಪಿ. ಚಿಣ್ಣಪ್ಪನವರ ಹೆಸರುಗಳನ್ನು ಮೆ. ಮೂಕೋಂಡ ಗಣಪತಿಯವರು ಸೂಚಿಸಿದ್ದನ್ನು ಮೆ. ಚಂಗಂಡ ಕುಟ್ಟಪ್ಪನವರು ಅನುಮೋದಿಸಿದರು. ಇವರಿಬ್ಬರ ಉಪ ಅಧ್ಯಕ್ಷರುಗಳಾಗಿ ಸರ್ವಸಮ್ಮತದಿಂದ ಆರಿಸಲ್ಪಟ್ಟರು.

ಜನರಲ್ ಸೆಕ್ರೆಟರಿ ಪದವಿಗೆ ಮೆ. ಪಿ ಐ. ಬೆಳ್ಯಪ್ಪ ಯಂ. ಎಲ್. ಸಿ. ಯವರ ಹೆಸರನ್ನು ಮೆ. ಜಮ್ಮಡ ಪೂವಪ್ಪನವರು ಸೂಚಿಸಿದ್ದನ್ನು ಮೆ. ಯಂ. ಗಣಪತ್ಯಯವರು ಅನುಮೋದಿಸಲಾಗಿ ಸರ್ವಸಮ್ಮತದಿಂದ ಪುಂಜೂರಾಯಿತು.

ಖಜಾನ್ಚಿಯವರ ಪದವಿಗೆ ಮೆ. ಮನೆಯಪಂಡ ಯಂ. ಚಿಣ್ಣಪ್ಪ ಯಂ. ಎಲ್. ಸಿ ಯವರ ಹೆಸರನ್ನು ಮೆ. ಅಚ್ಚಮೊಡ ಮೊದಪ್ಪನವರು ಸೂಚಿಸಿದರು. ಅದನ್ನು ಮೆ. ಸಿ. ಕುಟ್ಟಪ್ಪನವರು ಅನುಮೋದಿಸಲಾಗಿ ಏಕ್ಮತ್ಯದಿಂದ ನಿರ್ಣಯಿಸಲಾಯಿತು.

ಈ ಕೆಳಗಿನ ಮೇರೆ ಬಾಯಿಂಟ್ ಸೆಕ್ರೆಟರಿಗಳು ಆರಿಸಲ್ಪಟ್ಟರು. 1. ಕಿಗ್ಗಟ್ಟುನಾಡು ತಾಲೋಕಿಗೆ—ಮೆ. ಕೊಳ್ಳಿರಮಾಡ ಕರುಂಬೈಯ್ಯ ಯಂ. ಎಲ್. ಸಿ ಯವರು, 2. ಎಡೆನಾಲ್ಕುನಾಡು ತಾಲೋಕಿಗೆ—ಮೆ. ಮಂಡೀಪಂಡ ಸೋಮ್ಮಯ್ಯನವರು, 3. ವಾಡಿನಾಲ್ಕುನಾಡು ತಾಲೋಕಿಗೆ—ಮೆ. ಚಾರಿರ ಅಪ್ಪಯ್ಯನವರು, 4. ಮಡಿಕೇರಿ ತಾಲೋಕಿಗೆ—ಮೆ. ಮನೆಯಪಂಡ ಬೆಳ್ಯಪ್ಪನವರು 5 ನಂಜರಾಯಪಟ್ಟಣ ತಾಲೋಕಿಗೆ—ಮೆ. ಯಸ್. ಯನ್. ರಾಮಲಿಟ್ಟಯವರು.

ಈ ಕೆಳಗಿನವರು ಕಾರ್ಯಕಾರಿಮಂಡಳಿಯ ಸದಸ್ಯರಾಗಿ ಆರಿಸಲ್ಪಟ್ಟರು.

ಕಿಗ್ಗಟ್ಟುನಾಡು ತಾಲೋಕಿನ ಪರವಾಗಿ—

1. ಮೆ. ಗಳಾದ ಅಜ್ಜಕುಟ್ಟಿರ ಪೊನ್ನಪ್ಪನವರು, 2. ಅಚ್ಚಮೊಡ ಮೊದಪ್ಪನವರು 3. ತೀಕಿರ ಅಯ್ಯಯ್ಯನವರು, 4. ಚೇಂದಿರ ತಮ್ಮಯ್ಯನವರು, 5. ಪಿ. ಬಿ ಮುದ್ದಮ್ಮಯ್ಯನವರು, 6. ಜಿ. ವಿ ತಿಮ್ಮಯ್ಯನವರು, 7. ಕಾಳೇಂಗಳ ಚಿಣ್ಣಪ್ಪನವರು, 8 ಚೇಂಬರ ಕುಟ್ಟಪ್ಪನವರು.

ಯೆಡೆನಾಲ್ಕುನಾಡು ತಾಲೋಕಿನ ಪರವಾಗಿ—

1. ಮೆ. ಗಳಾದ ಕೋದಂಡ ಉತ್ತಯ್ಯ ಯಂ. ಎಲ್. ಸಿ. ಯವರು, 2. ಗುಡ್ಡಂಡ ಭೀಮಯ್ಯನವರು, 3. ಮೆ. ಅಬ್ದುಲ್ ಗಫೂರ್ ಬಾನ್ ಕೈಕ್ಲಿಯವರು, 4. ಏನಂಡ ಮಾಡಪ್ಪನವರು, 5. ಮೂಕೊಂಡ ಗಣಪತ್ಯಯವರು, 6. ಮಳಕಾಂಡ ಚಿಣ್ಣಪ್ಪನವರು, 7. ಮುಕ್ಕಾಟಿರ ಕರುಂಬೈಯ್ಯನವರು, 8. ಕೆ. ಯಸ್. ಸೂಫಿಯವರು.

ವಾಡಿನಾಲ್ಕುನಾಡು ತಾಲೋಕಿನ ಪರವಾಗಿ—

1. ಮೆ. ಗಳಾದ ಬಿದ್ದಂಡ ಸುಬ್ಬಯ್ಯನವರು, 2. ಅಂಜಪರವಂಡ ತಿಮ್ಮಯ್ಯನವರು, 3. ಪಲ್ಲಚಂಡ ಪೂಣಚ್ಚ ಯನವರು, 4. ಕೋಳೆರ ತಮ್ಮಯ್ಯನವರು, 5. ಯನ್. ಸಂಜೀವಯ್ಯನವರು, 6. ವಕ್ಕಲ ವೆಂಕಟ್ಯಯ್ಯನವರು, 7 ಬೆಪ್ಪಕ್ಕಂಡ ಪೂಚಯ್ಯನವರು, 8. ಜಂಗಂಡ ಕುಟ್ಟಪ್ಪನವರು.

ಮಡಿಕೇರಿ ತಾಲೋಕಿನ ಪರವಾಗಿ—

1. ಮೆ. ಗಳಾದ ಎನ್. ಮುದ್ದಪ್ಪ ಬಿ. ಎ., ಬಿ. ಎಲ್., ಯಂ. ಎಲ್. ಸಿ. ಯವರು, 2. ಐಚ್ಚಟ್ಟಿರ ಸುಬ್ಬಯ್ಯ ಯಂ. ಎ., ಬಿ. ಎಲ್., ರವರು, 3. ಮಂಡೇಟಿರ ಅಪ್ಪಯ್ಯನವರು, 4. ತೆಕ್ಕಡೆ ಆನಂದಯ್ಯನವರು, 5. ಯಂ. ಯಂ. ಸಿದ್ದೇಶ್ವರವರು, 6. ಮುಕ್ಕಾಟಿರ ಮುತ್ತಣ್ಣನವರು, 7. ಕೋರನ ದೇವಯ್ಯನವರು, 8. ಮಂಜಾಂಡಿರ ದೇವಯ್ಯನವರು.

ನಂಜರಾಜಪಟ್ಟಣ ತಾಲೋಕಿನ ಪರವಾಗಿ—

1. ಮೆ. ಗಳಾದ ಬಿ. ಎನ್. ಕೃಷ್ಣಪ್ಪನವರು, 2. ಹಳಗೋಟೆ ಲಕ್ಕಪ್ಪನವರು, 3. ಜೆಬ್ಬಟಿಲೆ ಪೊನ್ನಪ್ಪನವರು, 4. ಸಾಲತ್ತೀರಿ ಸಣ್ಣಪ್ಪ ಯಂ. ಯಲ್. ಸಿ. ಯವರು, 5. ಕರ್ಕಳ್ಳಿ ಪುಟ್ಟಯ್ಯನವರು, 6. ಇ. ಯನ್. ಶಂಕರ್ಯಯ್ಯನವರು, 7. ಮೆ. ಪೊನ್ನಂಡ ಪೊನ್ನಪ್ಪನವರು, 8. ಚಾಂಡ್ರು ಕಾಳಪ್ಪ ಯಂ. ಯಲ್. ಸಿ. ಯವರು.

ಆ ಮೇಲೆ ಸಂಘದ ಅಧ್ಯಕ್ಷರಾದ ಮೆ. ಸಿ. ಯನ್. ವೆಂಕಯ್ಯನವರು—ತನ್ನನ್ನು ಸಂಘದ ಅಧ್ಯಕ್ಷರಾಗಿ ಆರಿಸಿದ್ದಕ್ಕೆ ಸಭೆಯವರನ್ನು ವಂದಿಸಿ, ಕೃಷ್ಣಿಕಂವಾದ ವಿಷಯಗಳನ್ನು ಮಾಡಿ ಎಲ್ಲರಿಗೂ ಯೋಗ್ಯ ರೀತಿಯಲ್ಲಿ ಸ್ವಾಗತವನ್ನೀಡಿದ ಕಾರ್ಯಕ್ಕಾಗಿ ಸ್ವಾಗತ ಮಂಡಳಿಯವರಿಗೂ, ಪಿಸ್ಸು ಪ್ರಕಾರ ಎಲ್ಲ ವನ್ನೂ ನಡೆಸಲು ಸಹಾಯ ಮಾಡಿದ ಸ್ವಯಂ ಸೇವಕರಿಗೂ, ಇನ್ನು ತದ್ವೇತರಾಗಿ ಬೆಂಗಳೂರಿಂದ ಇಚ್ಛಾರು ಸ್ವಯಂ ಸೇವಕರನ್ನು ಕಳುಹಿಸಿದ್ದಕ್ಕೂ, ಕಾವು ಬುದ್ಧಾಗಿ ಈ ಸಭೆಗೆ ದಯಮಾಡಿಸಿದಕ್ಕೂ ಡಾಕ್ಟರ್ ಹರ್ಡೀಕರರಿಗೂ, ಬೆಂಗಳೂರಿಂದ ಬಂದು ಶ್ರಮ ವಹಿಸಿ ಇಲ್ಲಿಯ ಸ್ವಯಂ ಸೇವಕರಿಗೆ ತರಬೇತು ಕೊಟ್ಟದ್ದಕ್ಕೆ ಬೆಂಗಳೂರಿನ ಇಬ್ಬರು ಸ್ವಯಂ ಸೇವಕರಿಗೂ, ಅಡಿಗ ಮತ್ತು ಊಟದ ವಿಚಾರದಿಗೆ ಸ್ಥಳಬಟ್ಟು ಕೊಟ್ಟದ್ದಕ್ಕಾಗಿ ಸ್ವಾಮಿ ಕಾಂಕ್ಷಾನಂದರವರಿಗೂ, ಶಾಲಾ ಕಟ್ಟಡವನ್ನು ಬಿಟ್ಟುಕೊಟ್ಟದ್ದಕ್ಕೆ ಶಾಲಾ ಅಧಿಕಾರಿಗಳಿಗೂ, ಆ ಸಮಯದಲ್ಲಿ ಸಹಾಯಕ್ಕಾಗಿ ಮೈಸೂರಿಂದ ಪೊನ್ನಂಪೇಟೆಗೂ, ಮಡಿಕೇರಿಗೂ ಬಂದು ಸಹಾಯ ಮಾಡಿದ ಸ್ವಯಂ ಸೇವಕರಿಗೂ, ಬೆಂಗಳೂರಿನ ಪ್ರೊಫೆಸರ್ ಕೆ. ಯಸ್. ಅಯ್ಯಂಗಾರವರಿಗೂ ವಂದನೆಗಳನ್ನು ಅರ್ಪಿಸಿದರು ಮತ್ತು ಸ್ವರಾಜ್ಯ ಹೋರಾಟದಲ್ಲಿ ಜೈಲ್ ವಾಸವನ್ನೂ ಸಹ ಅನುಭವಿಸಿರುವ ಕನ್ನಡಿಗರ ಹಿತ್ತು ಪ್ರಾಮುಖ್ಯ ಮುಂದಾಳಾದ ಶ್ರೀಯುತ ಕೌಜಲಗಿ ಯವರಿಗೆ ನಾವು ಬಹು ಸ್ವಲ್ಪ ಸಮಯಕ್ಕೆ ಮುಂಚೆ ಮತ್ತ ಆಮಂತ್ರಣವಿತ್ತರೂ, ಅವರು ಈ ಸಭೆಯ ಅಧ್ಯಕ್ಷರಾಗಲು ಒಪ್ಪಿ, ಯಾವ ಶ್ರಮವನ್ನೂ ಗಣಿಸದೆ ಇಲ್ಲಿಗೆ ಬಂದು, ಈ ಮಹಾ ಸಭೆಯ ಅಧ್ಯಕ್ಷ ಪದವಿಯನ್ನು ವಹಿಸಿಕೊಂಡು, ಜನರಲ್ಲಿ ರಾಷ್ಟ್ರೀಯತ್ವವು ಕುಂಬಿಬಂತೆ ಭಾಷಣ ಮಾಡಿದ್ದಕ್ಕೆ ಸಂಘದ ಪರವಾಗಿ ಕೃತಜ್ಞತೆಯನ್ನು ಸೂಚಿಸಿದರು.

ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮೆ ಜೆ. ವೊದಪ್ಪನವರೂ, ಅಧ್ಯಕ್ಷರಾದ ಶ್ರೀ. ಕೌಜಲಗಿಯವರಿಗೂ, ಡಾಕ್ಟರ್ ಹರ್ಡೀಕರವರಿಗೂ, ಸ್ವಯಂ ಸೇವಕರಿಗೂ, ಪ್ರೊಫೆಸರ್ ಕೆ. ಯನ್ ಅಯ್ಯಂಗಾರವರಿಗೂ, ಸಭೆಯಲ್ಲಿ ನೆರೆದಿದ್ದ ಸಂಘದ ಮೆಂಬರುಗಳಿಗೂ, ಪ್ರೇಕ್ಷಕರಿಗೂ ವಂದಿಸಿದರು.

ಸಭೆಯು ಬರಕಾಸ್ತಾಗಿ ಜನರು ಜಡರುವ ಮುಂಜಿ ಡಾಕ್ಟರ್ ಹರ್ಡೀಕರವರು ಕೈಸೂಲಿನ ಮತ್ತು ಕೈಮಗ್ಗದ ಬಟ್ಟೆಯನ್ನೇ ಎಲ್ಲರೂ ಧರಿಸಬೇಕೆಂತಲೂ, ಪರದೇೀ ಬಟ್ಟೆಯನ್ನು ಸಂಪೂರ್ಣ ಬಹಿಷ್ಕರಿಸುವದಲ್ಲದೆ ಇರುವದನ್ನು ಸುಟ್ಟು ಬಾಡಿ ಮಾಡಬೇಕೆಂತಲೂ ಭಾಷಣ ಮಾಡಿ ಜನರಲ್ಲಿ ಹುರುಪು ಬಿಸಿದರು. ಕೂಡಲೇ ಹಲವರು ತಮ್ಮಲ್ಲಿದ್ದ ಪರದೇೀ ಬಟ್ಟೆಗಳನ್ನು ಸುಡಲು ಕೊಟ್ಟರು. ಸಭಾ ವಿಂಟಪದ ಹೊರಗೆ ಪರದೇೀ ಬಟ್ಟೆಗಳ ಹೋಮವು ನಡೆಯಿತು. ಈ ವೇಳೆಯಲ್ಲಿ 'ಭಾರತ ಮಾತಾಕೀ ಜೈ, ಕರ್ನಾಟಿಕ ಮಾತಾಕೀ ಜೈ, ವಂದೇ ಮಾತರಂ' ಎಂಬ ಕೂಗು ಸಭಿಕರಿಂದ ಆಗಾಗ್ಗೆ ಗಗನಕ್ಕೆ ಏರುತ್ತಿತ್ತು. ಖಾದಿ ಉಡುಪಿನ ವಿಷಯ ಜನರು ತುಂಬಾ ಉತ್ಸಾಹ ತೋರಿಸಿದರು.

ಅಧ್ಯಕ್ಷರ ಉಪಸಂಹಾರ ಭಾಷಣ.

ನೀವು ನನ್ನನ್ನು ಶ್ಲಾಘಿಸಿದ್ದಕ್ಕೆ ವಂದಿಸುತ್ತೇನೆ. ನೀವು ನನಗೆ ಕೊಟ್ಟ ಈ ದೊಡ್ಡ ಪದವಿಯನ್ನು ಅಂಗೀಕರಿಸಲು ಸಾಶಂಕನಾಗಿದ್ದೆ. ಆದರೆ ನಿಮ್ಮ ಉದಾರ ಸತ್ಕಾರದಿಂದ ನನ್ನ ಶಂಕೆಗಳೆಲ್ಲಾ ಹೋದವು. ನನ್ನ ಮೇಲೆ ತುಂಬಾ ಪ್ರೀತಿ ತೋರಿಸಿದಿರಿ. ನಾನು ಕನ್ನಡ ತಿಳಿದವನಾದ್ದರಿಂದ ಎಷ್ಟೋ ಸ್ಥಯೋಜನವಾಯಿತು ಎಷ್ಟೇ ದೂರದವರಾಗಿರಲಿ ಭಾಷೆ ಬಂದೇ ಆದರೆ ಆಸ್ಯೋನ್ಯಸ್ಯ ಸಹಾಯಕ್ಕೆ ತುಂಬಾ ಅವಕಾಶ ವಿದೆ. ಕರ್ನಾಟಕ ಏಕೀಕರಣಕ್ಕೆ ಒಟ್ಟಿನ ಮೇಲೆ ವಿರೋಧ ವಿಲ್ಲವೆಂತ ತಿಳಿಯಿತು.

ಹಿಂದೀಯರಲ್ಲಿ ಶಿಸ್ತು (Descipline) ಕಡಿಮೆ. ಕೆಲಸಗಾರರಿಗಿಂತ ಟೀಕಿಸುವರು ಹೆಚ್ಚು. ನಿಷೇಧದ ಮೂತುಗಳಿಂದ ದೂರವಿಸುತ್ತಿರದೆ ವಿಧಾಯಕ ಸಲಹೆಗಳನ್ನು ಕೊಡಬೇಕು. ಟೀಕೆಗೆ ಗುರಿಯಾಗುವ ಜನರು ಮಾಡುವಷ್ಟು ಕೆಲಸ ಸಹ ನಾವು ಮಾಡುವದಿಲ್ಲ. ಕೆಲಸ ಮಾಡಿದವರಿಗೇನೇ ಸಾರ್ವಜನಿಕ ಕೆಲಸದ ಕಷ್ಟಗಳು ಗೊತ್ತು. ಜನರನ್ನು ಮುಂದಾಳುಗಳನ್ನಾಗಿ ಆರಿಸುವ ಮುಂಚೆ ಅವರ ಗಣಾವಗುಣಗಳನ್ನು ಜೂರು ಜೂರಾಗಿ ಬಿಡಿಸಿರಿ. ಆದರೆ ಮುಂದಾಳುಗಳಾಗಿ ಆರಿಸಿಕೊಂಡಸಂತರ ಲೋಪಗಳನ್ನು ಮರೆತು ಗುಣಗಳನ್ನು ತೆಗೆದುಕೊಂಡು ಅವರು ಮಾಡುವ ಕೆಲಸಗಳಿಗೆ ಸಹಾಯ ಕರಾಗಬೇಕು. ಮುಖಂಡರನ್ನು ನಿಂದಿಸುವದೇ ನಮ್ಮ ಸ್ವಭಾವವಾಗಿದೆ ಈ ದುರ್ಗುಣವನ್ನು ಬಿಡಬೇಕು

ನಿಮ್ಮ ಮಹಾಸಭೆಯಲ್ಲಿ ಒಂದೇ ಸದಿಚ್ಛೆಗಳ ರೂಪುಗಳನ್ನು ಮಾತ್ರ ಮಾಡಿಕೊಂಡು ತೃಪ್ತರಾಗಿರುವದಿಲ್ಲ. ನಿಜಾ ನಿಷೇಧ, ಖಾದಿ ಸ್ವೀಕಾರ, ಸ್ವಯಂ ಸೇವಕರ ತಯಾರಿಸುವ ಮೊಂತಾದ ಕೆಲಸಗಳನ್ನು ಕೈಕೊಂಡಿದ್ದೀರಿ. ಈ ಕೆಲಸಗಳನ್ನು ಮಾಡಿ, ಇದು ಲೋಕ ಕಲ್ಯಾಣಕ್ಕೆ ಪಟ್ಟಿದ ಸಂಸ್ಥೆಯೆಂತ ತೋರಬಸಿಕೆಯು. ಆದರೆ ದೇಶದ ಕೆಲಸಕ್ಕೆ ತರುಣರು ಮುಂದೆ ಬರಬೇಕು. ಸ್ವಯಂಸೇವಕರಾಗಲು ತರುಣರು ತಿಕ್ಷ್ಣ ಪಡೆಯಬೇಕು. ಈ ದೇಶಕ್ಕೆ ಕಡಿಮೆ ಪಕ್ಷ ನೂರು ಮಂದಿ ತರಬೇತಾದ ಸ್ವಯಂ ಸೇವಕರಾದರೂ ಬೇಕು. ಕೊಡಗಿನ ಯುವಕರ ಮುಖ ನೋಡಿದರೆ ವ್ಯಸನವಾಗುತ್ತದೆ. 16, 18 ವರ್ಷ ವ್ಯಾಯದ ಯುವಕರ ಮುಖದಲ್ಲೇ ರಕ್ತವಿಲ್ಲ, ನಿಮ್ಮ ಚರ್ಚೆಗಳಲ್ಲಿ 1000 ಒಟ್ಟಿ ಜಮೀನಿನ ಮೂಲೀಕರು ಮುಂತಾಗಿ ಹೇಳುವದನ್ನು ಕೇಳಿದೆ. ಅತ್ಯೆಲ್ಲಾ ಜಮೀನಿನ ಉತ್ಪತ್ತಿಯನ್ನು ತಿಂದು ಜೀವಿಸುವವರೂ ಸಹ ಯಾಕೆ ಕೃಷಕರಾಗಿ ಇದ್ದೀರಿ? ನಿಜವಾದ ಕೃತಿಯಕರಾಗಿ. ಕರ್ನಾಟಕದ ಮೂಕೆಯೂ ಕೊಡಗೂ ಒಂದೇ ಇದೆ. ಬೆಳ್ಳಾಮನ್ನು ಮೆರತಾಗಿಗು ಒಕ್ಕಮಿಸುವ ಪ್ರಯತ್ನದಲ್ಲಿದ್ದಾರೆ. ಕೊಡಗಿನವರು ಬೆಳ್ಳಾಮಿನಲ್ಲಿ ನಡೆಯಲಿಕ್ಕಿರುವ ಪರಿಷತ್ತುಗಳಿಗೆ ಬಂದು ಸಹಾಯಕರಾಗಬೇಕು. ಕೈಸೂಲಿನ ಬಟ್ಟೆಗೆ ಉತ್ಕೃಷ್ಟವನ್ನು ಕೊಡುವ ಕರಾವು ಮಾಡಿಕೊಂಡಿದ್ದೀರಿ. ಈ ಸಭೆ ಭಕರ್ಕಾಸ್ತಾದ ಸಂತರ ಡಾಕ್ಟರ್ ಹರ್ಡೀಕರವರು ಪರದೇೀ ಬಟ್ಟೆಯ ಪೂರ್ತಿ ಹೋಸು ಮಾಡುತ್ತಾರೆ. ಆ ಹೋಮಕ್ಕೆ ನಿಮ್ಮ ಮೈಮೇಲೆ ಇರುವ ಪರದೇೀ ಬಟ್ಟೆಯನ್ನು ಕೊಡಿರಿ. ಜಾಲುಂ ಇಲ್ಲ. ಪರದೇೀ ಬಟ್ಟೆ ಹಾಕಿದರೆ ನಾಚಿಕೆಯಿಂತ ತೋರಿದರೆ ಅಂಥಾ ಪರದೇೀ ಬಟ್ಟೆಯನ್ನು ಕೊಡಿ ಎಂತ ಹೇಳಿ ಪುನಃ ತನಗೆ ಶ್ರೇಷ್ಠ ಪದವಿ ಕೊಟ್ಟು ಗೌರವಿಸಿದ್ದಕ್ಕೆ ವಂದಿಸಿ ಸಭೆಯನ್ನು ಭರ್ಕಾಸ್ತು ಮಾಡಿದರು.

ARMS & AMMUNITI... ಯಂ. ಮಂಜನಾಥಯ್ಯ
3 ar Abdul Rehman Street... ಸ ಮಾಡಿದಕ್ಕಾ
58-34 BOMBAY. 3.

ಸುಸಂದರ್ಭ.

ದಿ ನೇಶನಲ್ ಲೈನ್‌ಸ್ಟಾಕ್ ರಿಜಸ್ಟ್ರೇಶನ್ ಬ್ಯಾಂಕ್ ಲಿಮಿಟೆಡ್.

"ಕಾರ್ಯಲ್ ಬಿಲ್ಡಿಂಗ್ಸ್" ಮೌಂಟುರೋಡು, ಮದ್ರಾಸು.

ಈ ಬ್ಯಾಂಕಿನವರು ಕೊಡಗು ದೇಶದಲ್ಲಿ ಮಡಿಕೇರಿ ಮತ್ತು ವೀರರಾಜೇಂದ್ರಪೇಟೆಯಲ್ಲು ಬ್ರಾಂಚ್ ಆಫೀಸುಗಳನ್ನು ತೆರೆದಿರುವದಲ್ಲದೆ ಆಯಾಯ ಮುಖ್ಯ ಪಟ್ಟಣಗಳಲ್ಲಿ ಸಬ್ ಆಫೀಸುಗಳನ್ನು ತೆರೆದಿರುತ್ತಾರೆ.

ಇವರು ಅನೇಕ ತರದ ಚಿಟ್ ಫಂಡುಗಳು ಯೂ ಸೇವಿಂಗ್ಸ್ ಬ್ಯಾಂಕ್ ಜವಾಬ್ದಾರಿಕೆಯಿಂದ ಹಣ ಇತರ ಕೊಡುವರು. ಇದರಲ್ಲಿ ಅನೇಕ ತರದಿಂದ ಹಣ ಶೇಖರಿಸುವ ಉಪಾಯಗಳೊಳಗೊಂಡಿವೆ. ಈ ದೇಶದ ಅನೇಕ ಜನರು ಮೇಸನ ಮತ್ತು ಕೃತ್ರಿಮದ ಚಿಟ್ ಫಂಡುಗಳಿಗೆ ಸೇರಿ ಒಳಿತು ತೊಂದರೆಪಟ್ಟಿರುತ್ತಾರೆ. ಆ ಬಗ್ಗೆ ಸರಕಾರಿ ಜವಾಬ್ದಾರಿಕೆಯಿಂದ ಬಡಬಗ್ಗರು ಮೊದಲ್ಗೊಂಡು ಶ್ರೀಮಂತರವರೆಗೂ ತಮ್ಮ ಹಣದ ಆಡಚಣೆಗಳನ್ನು ನೀಗಿಸುವ ಬಗ್ಗೆ ಅಲ್ಪ ಕಮಿಶನ್ ಇಟ್ಟು ಚಿಟ್ ಫಂಡ್ ನಡಿಸುತ್ತಾರೆ ಬೇಕಾದವರು ಆ ಗಾಗ್ಗೆ ಒಂದು ಫಂಡಿಗೆ ಸೇರಿ ಬೇಕಾದ ಸಹಾಯಗಳನ್ನು ಪಡಿಯಬಹುದು. ಇದರ ವಿಶಯ ರೂಲ್ಸ್‌ಗಳು ಯೂ ಬೇಕಾದ ಅನುಭವಗಳು ಮಡಿಕೇರಿ 'ಅದಿಶೇಷ ಕಂಪನಿಯ ಈ ಬ್ಯಾಂಕಿನ ಸಬ್ ಏಜಂಟರಾದ ಪಿ. ಆರ್. ಶೇಷಪ್ಪರೈಗಳವರ ಮುಖಾಂತರ ತಿಳಿದುಕೊಳ್ಳಬಹುದು ಬರುವ ಮೇ ತಿಂಗಳಲಾಗಾಯ್ತು ದರಾವರು ಚೀಟಿಗಳು ವಿಲಂ ಕರೆಯಲ್ಪಡುತ್ತವೆ.

2 ಪಿ. ಆರ್. ಶೇಷಪ್ಪರೈ.

ಜೀ ವರ್ಷಗಳ ಅನುಭವಸಿದ್ಧ ಮತ್ತು ಪಾವಿರಾರು ಜನರಿಂದ ಉಪಯೋಗಿ ಸಲ್ಪಟ್ಟ ಔಷಧಗಳು.

೧. ದಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿಬರುತ್ತಿ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಚಟ್ಟಾ ಪಕಳಕಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ಕದೋಷ ಛೆ, ರಕ್ತಪಿತ್ತ, ಜಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ತಳದುಬೋದ ಶಕ್ತಿಯು ಪುನಃ ತುಂಬಿಕೊಳ್ಳುವದು.—ಕೃಯ ಡಬ್ಬಿ 1 ಕ್ಕೆ 2—8—0, ಮೂರು ಡಬ್ಬಿಗಳಿಗೆ ರೂ. 7—0—0.

೨. ಮೇಹಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳುಪು, ಹಸಿರುಯಂತೆ ಹೋಗಕಕ್ಕೆ ಕೀವನ್ನೂ, ವ್ರಣವನ್ನೂ, ಉರಿಯನ್ನೂ, ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ 2—8—0. 3 ಕ್ಕೆ 7—0—0.

೩. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.
ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೪. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವಜ್ವರ, ಮರೆ ಜ್ವರ, 2 ಯೂ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಒರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೫. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅವೇಕ್ಷವಾದದ್ದು. ಕಣ್ಣು ಉರಿ, ತಲೆ ಉರಿ, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ. ಬಾಟ್ಲಿ 1 ಕ್ಕೆ 1—4—0. 3 ಕ್ಕೆ 3—8—0.

೬. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0—8—0. 3ಕ್ಕೆ 1-6-0.

೭. ಕಸ್ತೂರಿ ವಿಶ್ರಣ.

ದಕ ಮುಖಲಾಪ್ಷ ಜಾಣಂತಿಯರಿಗೆ. ಬಾಟ್ಲಿ 1 ಕ್ಕೆ 1-8-0, 3 ಬಾಟ್ಲಿಗೆ 4—4—0.

೮. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ. ಬಾಟ್ಲಿ 1 ಕ್ಕೆ 1-4-0, 3 ಬಾಟ್ಲಿಗೆ 3-8-0

೯. ಚವನ ಪ್ರಾಸ ಡಬ್ಬಿ 1 ಕ್ಕೆ 2—0—0.

ಎಲ್ಲಾ ಸನ್ನೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸ್ಥಿತಿ ಎಂಥಾದ್ದು ವಿವರವಾಗಿ ಬರೆದಲ್ಲಿ ಔಷಧಿಗಳಕ್ಕೆ ತಕ್ಕವಾದ ಔಷಧಿ ರವಾನಿಸಿ ಬಹುದು. ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದೀಕ್ ಫಿಜಿಸಿಯನ್ಸ್,
52—26 ರಘುವಂತಿ, ಮಂಗಳೂರು, ದ. ಕನ್ನಡ.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿಯ ವಾರ್ಷಿಕ ಮಹಾಸಭೆಯು ತಾ. 25—5—29 ನೇ ಶನಿವಾರ ಸಾಯಂಕಾಲ 3 ಗಂಟೆಗೆ ಮಡಿಕೇರಿ ವಿದ್ಯಾರ್ಥಿ ಭವನದಲ್ಲು ನಡೆಯುತ್ತದೆಂದು ತಿಳಿಯುತ್ತೇವೆ.

ಪೊಲೀಸು ಸುಪ್ರಿಂಟೆಂಡೆಂಟರುಗಳಾದ ಮೆ. ಕಂಠಿತಂಡ ಕಾರ್ಯಪ್ಪನವರು ಸಿದ್ದಾಪುರದಿಂದ ಸೋಮವಾರಪೇಟೆಗೂ, ಮೆ. ಕೋದಂಡ ಮುದ್ದಪ್ಪನವರು ಸೋಮವಾರಪೇಟೆಯಿಂದ ಸಿದ್ದಾಪುರಕ್ಕೂ ವರ್ಗಾಯಿಸಲ್ಪಟ್ಟಿರುವರು.

ಮೆ. ಮೊಳೇರಿರ ಡಬ್ಲ್ಯು. ಮುತ್ತಣ್ಣನವರು ಯಲ್. ಯಂ. ಪಿ. (ಬಿ ಆಸಿಸ್ಟೆಂಟ್ ಕರ್ಜನ್) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರೆಂದು ಕೇಳಿ ಸಂತೋಷ ಪಡುತ್ತೇವೆ. ಪೀಠಿಯವರ ಪರೀಕ್ಷೆಯ ಫಲಿತಾಂಶವು ನಮಗೆ ಇನ್ನೂ ಗೊತ್ತಾಗಿರುವದಿಲ್ಲ.

ಗೌಡುಗಳ ವಿದ್ಯಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆಯು ಕಳೆದ ತಾ. 27 ರಲ್ಲಿ ಕಿತ್ತಮಕ್ಕೂರು ಗ್ರಾಮದಲ್ಲಿ ಮೆ. ಐ. ಸಿ. ಸಿ.ಬೈಯ್ಯ ಯಂ. ಎ, ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರ ವಿವರವು ಬರುವ ವಾರ ಪ್ರಕಟಿಸಲ್ಪಡುವದು.

ಒಂದು ವಾರದಿಂದ ಮಡಿಕೇರಿ ಗಾಳಿಕೇರಿಯಲ್ಲಿ ಸಿಡುಬು ರೋಗವು ವ್ಯಾಪಕವಾಗಿದೆ. ಈಗಾಗಲೇ 7 ಜನರಿಗೆ ಆಂಟಿವೆ ಸದರಿ ಕಾಯಿಲೆಯಿಂದ ಮೆ ಎ. ವೇಣು ಗೋಪಾಲ ನಾಯಡುರವರು ಈ ದಿನ ಬೆಳಿಗ್ಗೆ ಶೀವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಯವರ ಒಬ್ಬ ಶಿಷ್ಯರಾದ ಸ್ವಾಮಿ ಪರಮಾನಂದರವರು ವ್ಯಯತ್ಸಿಸಿ ಬೇಂಗುನಾಡು ಜೇರಂಬಾಣೆಯಲ್ಲಿ ಕಟ್ಟಿಸಿರುವ ಮಠದಲ್ಲಿ ಕಳೆದ ಒಂದು ವಾರ ದೇವತಾ ಪೂಜೆ, ಭಜನೆ, ಹರಿಕಥೆ ಮುಂತಾದವುಗಳನ್ನು ವಿಶ್ವಾಭಿಷೇಕಯಿಂದ ನಡಿಸಿದರೆಂದೂ, ಆಖೈರು ದಿನವಾದ ತಾ. 28ರಲ್ಲಿ ಸುಮಾರು ಒಂದು ಸಾವಿರದಷ್ಟು ಜನರು ನೆರೆದಿದ್ದರೆಂದೂ ತಿಳಿಯ ಬರುತ್ತದೆ.

ಕೊಡಗಿನ ಮುಸ್ಲಿಮ್ ಕಾನ್‌ಫರೆನ್ಸು ಕಳೆದ ತಾ 30 ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು. ಮದ್ರಾಸಿನ ಕೈಸರ್ ಎ ಸಂಘದ ಸೆಕ್ರೆಟರಿಯೂದ ಮೆ. ಎಸ್. ಎ. ಫಾಸಿಲ್‌ರವರು ಅಧ್ಯಕ್ಷರಾಗಿದ್ದರು. ಸುಮಾರು 700 ಜನರು ನೆರೆದಿದ್ದರೆಂದು ತಿಳಿಯುತ್ತೇವೆ. ಮೆ. ಫಾಸಿಲ್‌ರವರು ಮರುದಿನ ವೀರಾಜಪೇಟೆಯಲ್ಲಿ ಕೋಮುವಾರು ತತ್ವವನ್ನು ಕುರಿತೂ, ಈ ತಾ. 3 ರಲ್ಲಿ ಮಡಿಕೇರಿಯಲ್ಲಿ ಮುಸ್ಲಿಮೀಯ ಮತವನ್ನು ಕುರಿತೂ ಭಾಷಣಗಳನ್ನು ಮಾಡಿದರು.

ಮೆ. ಕೋಟೆರ ಚಿಣ್ಣಪ್ಪನವರು ತನ್ನ ಸ್ವರ್ಗೀಯ ಪೂಜ್ಯ ಗಂಗಮ್ಮನವ್ವನ್ನು ಜ್ಞೇರಾತನ್ನಲ್ಲಿರುವ ಗುರುಕುಲಕ್ಕೆ ಸ್ವಾಧೀನ ಲಂಬನವನ್ನೂ, ರಾಷ್ಟ್ರೀಯ ಭಕ್ಷಿಯನ್ನೂ ಹೆಚ್ಚಿಸುವ ವಿದ್ಯಾಭ್ಯಾಸ ಪಡೆಯಲಿಕ್ಕಾಗಿ ಕಳುಹಿಸುವ ಸಂಬಂಧ ಅವರು ಮಡಿಕೇರಿಯಲ್ಲಿರುವ ತಮ್ಮ ಭವನದಲ್ಲಿ ನಿನ್ನೆ ದಿನ ಸಾಯಂಕಾಲ ಅವರ ಸುಮಾರು 50 ಸ್ನೇಹಿತರಿಗೆ ಒಂದು ಟೀ ಪಾರ್ಟಿ ಯನ್ನು ಕೊಟ್ಟರು. ಅವರು ನಾಳೆ ಬೆಳಿಗ್ಗೆ ಜ್ಞೇರಾತನ್ನಿಗೆ ಹೊರಟು ಹೋಗುವರು.

ಮುನ್ಸಿಪಲ್ ಏನರ್ಸಿಯರಾಗಿ ರಿಟಯರ್ ಆಗಿದ್ದ ಚಿಂಬೆಬೆಳೆಯೂರು ಗ್ರಾಮದ ಮೆ. ಮಂಡೇಪಂಡ ಮೊದಪ್ಪನವರು ಕಳೆದ ತಾ. 30 ರಲ್ಲಿ ವೀರಾಜಪೇಟೆ ಆಸ್ಪತ್ರೆಯಲ್ಲಿ ಕೋವೆ ಕಾಯಿಲೆಯಿಂದ ಶಿವಾಧೀನರಾಡರೆಂದು ತಿಳಿಯಲು ವ್ಯಸನಪಡುತ್ತೇವೆ. ಇವರು ಆ ಗ್ರಾಮದ ಲಂತಾನ ಸಂಘದ ಪ್ರೆಸಿಡೆಂಟರಾಗಿದ್ದು ತುಂಬಾ ಮೇಹನತ್ತಿನಿಂದ ಕೆಲಸವನ್ನು ತ್ತಿದ್ದರಲ್ಲದೆ, ಸರಕಾರ ಸಂಘದ ಮತ್ತು ದೇವಸ್ಥಾನ ಕಾರ್ಯಗಳಲ್ಲೂ ತುಂಬಾ ಭಾಗವಹಿಸುತ್ತಿದ್ದರೆಂದು ತಿಳಿಯುತ್ತೇವೆ.

ಮಡಿಕೇರಿ ರಿವೆನ್ಯು ಆಫೀಸಿನಿಂದ ಮೆ. ಕರ್ತವೂಡ ಮೇದೈಯ್ಯನವರನ್ನು ವೀರಾಜಪೇಟೆ ತಾಲೋಕು ಆಫೀಸಿನ ತಿರಸ್ಕೆದಾರರಾಗಿಯೂ, ಅಲ್ಲಿ ತಿರಸ್ಕೆದಾರರಾಗಿದ್ದ ಮೆ. ಮುಂಜಾವಿರ ಐಯ್ಯನ್ನವರನ್ನು ರಿವೆನ್ಯು ಆಫೀಸಿಗೂ, ಇಂಗ್ಲಿಷ್ ಆಫೀಸಿನಿಂದ ಮೆ. ಪಟಗೋವಾಲಾಚಾರ್ಯರನ್ನು ಸೋಮವಾರಪೇಟೆ ತಾಲೋಕು ಆಫೀಸಿನ ತಿರಸ್ಕೆದಾರರಾಗಿಯೂ, ಅಲ್ಲಿ ತಿರಸ್ಕೆದಾರರಾಗಿದ್ದ ಮೆ. ಮೇರಿಯಂಡ ಕುಂಞಪ್ಪನವರನ್ನು ವೀರಾಜಪೇಟೆ ಸಾಡಿಗೆ ಎಕ್ಸೈಸ್ ಸುಪ್ರಿಂಟೆಂಡೆಂಟ್ ಇನ್‌ಸ್ಪೆಕ್ಟರಾಗಿಯೂ ವರ್ಗಾಯಿಸಿರುವರೆಂದು ತಿಳಿಯುತ್ತೇವೆ.

ಹಿಂದೂಸ್ಥಾನದ ಪ್ರಸಿದ್ಧ ಮುಂಜಾಳುಗಳಾದ ಪಂಡಿತ ಮದನಮೋಹನ ಮಳವೀಯರು ಮೈಸೂರಿನ ಡಾಕ್ಟರ್ ಮೂಂಬೆಯವರು ಕೆಲವು ದಿವಸಗಳಲ್ಲಿ ಮೈಸೂರಿಗೆ ಬರುವರೆಂದು ತಿಳಿದು ಅಲ್ಲಿಗೆ ತೊಡಗಿಗೂ ಬಂದು ಒಂದೆರಡು ಭಾಷಣಗಳನ್ನು ಮಾಡಬೇಕೆಂದು ವಿವರಿಗೆ ಜನೋಪಕಾರ ಸಂಘದ ಸೆಕ್ರೆಟರಿಯವರು ಆಮಂತ್ರಣವನ್ನು ಕಳುಹಿಸಿರುವರೆಂದು ತಿಳಿಯುತ್ತೇವೆ.

ಪಿರಿಟೋಲಮಲ್ ಪಟ್ಟಣಾಮಿನಲ್ಲಿ ತರಬೇತು-ಹೊಂದುತ್ತಿದ್ದ ಸಿಪಾಯಿ ವಾಲೂರಿನ ಗ್ರಾಮದ (ಗೊಲ್ಲರ) ನಂಬಾಂಡ ಮೆ. ಕುಂಞಣ್ಣನವರು ಕಳೆದ ಸೋಮವಾರ ಮಧ್ಯಾಹ್ನ ಓಂಕಾರೇಶ್ವರ ದೇವಸ್ಥಾನದ ತೆಪ್ಪೆಯಲ್ಲಿ ಸ್ನಾನ ಮಾಡುತ್ತಿದ್ದಾಗ ಈಜು ಗೊತ್ತಿದ್ದರೂ ಅಕಸ್ಮಿತವಾಗಿ ನೀರಿನಲ್ಲಿ ಮುಳುಗಿ ಹೋದರು. ಅವರ ಸಂಗಾತಿಗಳು ಬೇರೆ ಕೆಲವರೂ ಆ ಗ್ಗೆ ಅಲ್ಲಿ ಸ್ನಾನ ಮಾಡುತ್ತಿದ್ದರೂ ಅವರನ್ನು ರಕ್ಷಿಸಲು ಸಾಧ್ಯವಾಗದೆ ಹೋಯಿತು. ಕೆರೆಯಲ್ಲಿ ನೀರನ್ನು ಬತ್ತಿಸಿ ಮರುದಿನ ಬೆಳಿಗ್ಗೆ ಅವರ ಶವವನ್ನು ತೆಗೆದು ದಫನ ಮಾಡಿದರು.

ಹಿಂದೂದೇಶ.

ತನ್ನ ದೇಶದಿಂದ ಗಡೀಪಾರು ಮಾಡಲ್ಪಟ್ಟು ಕೊಡೆಕಾನಾಲಿನಲ್ಲಿ ಇಡಲ್ಪಟ್ಟಿದ್ದ ನಾಭಾದ ಮಹಾರಾಜರವರ ಅನಾಭೋಗ್ಯದ ದೆಸೆಯಿಂದ ಅವರನ್ನು ಊಟಕವಾಡಿಗೆ ಹೋಗಿ ಅಲ್ಲಿ ರಲು ಬಿಟ್ಟಿರುವರು.

ಬೊಂಬಾಯಿಯಲ್ಲಿ ಸಾಧಾರಣ ಒಂದೂವರೆ ಲಕ್ಷ ಜನ ಕೂಲಿಕಾರರು ಮುಷ್ಕರ ಹಿಡಿದಿರುವರು. ಸುಮಾರು 80 ಗಿರಣಿಗಳು ಮುಚ್ಚಲ್ಪಟ್ಟಿವೆ. ಕೂಲಿಕಾರರನ್ನು ಸಮಧಾನಗೊಳಿಸಲು ಅನೇಕ ಪ್ರಯತ್ನಗಳು ನಡೆಯುತ್ತಿವೆ.

ಚಿತ್ತರಂಜನ ದಾಸರಿಂದ ಹೊರಡಿಸಲ್ಪಟ್ಟ ಕಲ್ಕತ್ತೆಯ "ಫಾರ್‌ವರ್ಡ್" ಪತ್ರಿಕೆಯ ಕಂಪೆನಿಯು ನಷ್ಟದಿಂದ ಕೆಲಸ ನೂಡುತ್ತಿದ್ದುದರಿಂದ ಸರಕಾರದವರು ಆದನ್ನು ಮುಕ್ತಾಯ ನೊಳಿಸಿದರು. ಈಗ ಅದರ ಬದಲು 'ಹೊಸ ಫಾರ್‌ವರ್ಡ್' ಪತ್ರಿಕೆಯೊಂದು ವ್ಯಾಪಾರಾಭಿವೃದ್ಧಿಪಡಿಸಲ್ಪಟ್ಟಿದೆ.

ಅಸ್ಸಾಮು ಕೌನ್ಸಿಲಿನ ಜನರಾನಾಯಿಯಲ್ಲಿ ಸ್ವರಾಜ್ಯಸಾರ್ಟಿಯ ಮುಂದಾಳು ಮತ್ತು ಹಲವು ಮೆಂಬರುಗಳು ವಿರೋಧವಿಲ್ಲದೆ ಆರಿಸಲ್ಪಟ್ಟಿರುವರು. ಆದರೆ ಹೊರ ಮೇಲೆ ಅವಿಶ್ವಾಸದ ಠರಾವು ತಂದಿದ್ದರಿಂದ ದೆಸೆಯಿಂದ ಕೌನ್ಸಿಲು ಮುಕ್ತಾಯಗೊಳಿಸಲ್ಪಟ್ಟಿತೋ ಆ ಪೂಜಿ ಮುಂತ್ರಿ ರಿವೆರೆಂಡ್ ನಿಕಲ್ಸ್‌ರವರ ಉಪಯೋಗವಾಪಾತೆಯ ಅರ್ಜಿಯು ಸರಿಯೆಂಗಿಲ್ಲದ್ದರಿಂದ ತಿರಸ್ಕರಿಸಲ್ಪಟ್ಟಿದೆ. ಅವರು ಆದರ ಮೇಲೆ ಅಪ್ಪೀಲು ಮಾಡಿರುವರಂತೆ.

ಪಂಜಾಬ ವಿಧಾನಸಭೆಯು ಏಪ್ರಿಲ್ 30ನೇ ತಾರೀಕಿನ ದಿನ ಮದ್ರಾಸಿನಲ್ಲಿ ಹಿಂದೂ ದೇಶದ ಈಗಿನ ರಾಜಕೀಯ ಸ್ಥಿತಿಯನ್ನು ಕುರಿತು ಒಂದು ದೊಡ್ಡ ಭಾಷಣವನ್ನು ಮಾಡಿದರು. ಎಲ್ಲರೂ ಪಕ್ಷ ಭೇದಗಳನ್ನು ಮೂಲೆಗೊತ್ತಿ ಸ್ವರಾಜ್ಯ ಸ್ಥಾಪನೆಗಾಗಿ ಹೋರಾಡಬೇಕೆಂತಿಯೂ, ದೇಶದಲ್ಲಿ ಈಗ ಒಗ್ಗಟ್ಟು ಅತ್ಯಾವಶ್ಯಕವಾಗಿರುವುದರಿಂದ ಪಂಗಡಗಳನ್ನು ಹೆಚ್ಚಿಸುವುದು ಸರಿಯಲ್ಲವಾಗಿಯೂ ಅಭಿಪ್ರಾಯ ತೊಟ್ಟರು. ದ್ವಿ ಸು.ಬ ಸರ್ಕಾರವಿರುವ ವರೆಗೆ ಯಾವ ವಿಧದಲ್ಲಿಯೂ ಸರಕಾರ ನ್ಯಾಕರಿಯನ್ನು ಸಹಿಸಿಕೊಳ್ಳಬಾರದೆಂಬುದೇ ಅವರ ಧ್ಯೇಯವಾಗಿದೆ.

ಬರುವ ಜೂನ್ ತಿಂಗಳಿಂದ ನಾಲ್ಕು ತಿಂಗಳು ರಜೆಯಲ್ಲಿ ಸೈಸರಾಯರಾಂಡ ಲಾರ್ಡ್ ಆರ್ವಿನ್‌ರವರು ಇಂಗ್ಲೆಂಡಿಗೆ ಹೋಗುವದರಿಂದ ಅವರ ಬದಲು ಮದ್ರಾಸಿನ ಗವರ್ನರಾಗಿರುವ ಲಾರ್ಡ್ ಗಾಷನ್‌ರವರು ತತ್ಕಾಲ ವೈಸರಾಯರಾಗಿ ನೇಮಿಸಲ್ಪಟ್ಟಿರುವರು. ಆ ಖಾಲಿ ಸ್ಥಳಕ್ಕೆ ಲೆಫ್ಟೆನೆಂಟ್ ಕರ್ನಲ್ ಜಾರ್ಜ್ ಸ್ಟೇನ್ಲೆಯವರು ಮದ್ರಾಸು ಗವರ್ನರಾಗಿ ನೇಮಿಸಲ್ಪಟ್ಟಿರುವರು; ಇವರು ಇಂಗ್ಲೆಂಡಿನಿಂ ಬಂದು ಗವರ್ನರ ಪದವಿಯ ಚಾರ್ಜು ಮಹಿಸಿಕೊಳ್ಳುವ ವರೆಗೆ ಎಗ್ಸಿಕ್ಯೂಟಿವ್ ಕೌನ್ಸಿಲಿನ ರಿವಿನ್ಯು ಮೆಂಬರಾಗಿರುವ ಸರ್. ಯನ್. ಇ. ಮೊರ್ಗ್ಯಾನ್ಸ್‌ರವರನ್ನು ಆಕ್ಟಿಂಗಾ ಗವರ್ನರಾಗಿ ನೇಮಿಸಿರುವರು.

ವಿದೇಶ.

ಹಿಂದೂದೇಶದಲ್ಲಿ ಈಗ ನಡೆಯುತ್ತಿರುವ ವಿದೇಶಿ ಬಟ್ಟೆಗಳ ಬಹಿಷ್ಕಾರದ ಫಲಿತಾಂಶವಾಗಿ ಇಂಗ್ಲೆಂಡಿನ 'ಬ್ಲೇಕ್‌ಬರ್ನ್' ಎಂಬ ಸ್ಥಳದಲ್ಲಿ 29 ಗಿರಣಿಗಳು ಮುಚ್ಚಲ್ಪಟ್ಟಿವೆಯಂತೆ.

ಕಳೆದ ತಾ. 29ರಲ್ಲಿ ಬ್ರಿಟಿಷ್ ವಾರ್ಲಿಮೆಂಟಿನ ವಿಟಿಂಗು ನಡೆಯುತ್ತಿರುವಾಗ ಒಬ್ಬ ಪ್ರೇಕ್ಷಕನು 'ಸೈಮನ್ ಕಮಿಷನು ಮುಳಿಲೆಗೆ ಹೋಗಲಿ' ಎಂದು ಕೂಗಿದನು. ಅವನನ್ನು ಹೊರಕ್ಕೆ ಸಾಗಿಸಿದೊಡನೆ ಇನ್ನೊಬ್ಬ ಪ್ರೇಕ್ಷಕನು ಹಾಗೆಯೇ ಕೂಗಿದನು. ಅವನನ್ನೂ ಹೊರಗೆ ಕಳುಹಿಸಿದರು. ಆಗಲೇ ಆಂಧ್ರ ಪತ್ರಿಕೆಗಳೂ ವಿಟಿಂಗಿಗೆ ಎಸೆಯಲ್ಪಟ್ಟವಂತೆ!

ಆಫ್ಘಾನಿ ಸ್ಥಾನದಲ್ಲಿ ಅಮೆನುಲ್ಲಾಖಿಗೆ ಸಹಾಯ ಮಾಡುತ್ತಿರುವ ಜನರಲ್ ನಾದಿರ್ ಖಾನ್‌ರವರನ್ನು ಜೀವಸಹಿತ ಹಿಡಿದು ತಂದುಕೊಟ್ಟವರಿಗೆ 4) ಸಾವಿರ ರೂಪಾಯಿ ಮತ್ತು ಒಂದು ಕೋವಿಯೂ, ಅವನ ತಲೆಯನ್ನು ತಂದುಕೊಟ್ಟವರಿಗೆ 30 ಸಾವಿರ ರೂಪಾಯಿ ಮತ್ತು ಒಂದು ಕೋವಿಯೂ, ಸುತ್ತ ಆವರ ಪ್ರತಿಯೊಬ್ಬ ಸಹೋದರನನ್ನು ಹಿಡಿದು ತಂದವರಿಗೆ ಹತ್ತು ಸಾವಿರ ರೂ ಮತ್ತು ಒಂದು ಕೋವಿಯೂ ಇನಾಮಾಗಿ ಕೊಡಲ್ಪಡುವೆದೆಂದು ಅವರ ಶತ್ರುವಾದ ಬಚ್ಚಾ-ಇ-ಸಾಕೋರವರು ಪ್ರಕಟಿಸಿರುವರಂತೆ!

ಸೆಂಟ್ರಲ್ ಬ್ಯಾಂಕ್ ವಿಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ವಿಟಿಂಗು ಫಿಫ್ರಿಲ್ ತಾರೀಕು 29ರಲ್ಲು ಮಡಿಕೇರಿಯಲ್ಲಿ ಜನೋಪಕಾರ ಸಂಘದ ಹಾಲ್‌ನಲ್ಲಿ ನಡೆಯಿತು. ಹಾಜರಿದ್ದ ಮೆಂಬರುಗಳು:—1. ರಾವ್ ಬಹದ್ದೂರ್ ಕೆ. ಅಪ್ಪಯ್ಯನವರು, (ಪ್ರೆಸಿಡೆಂಟರು) 2. ರಾವ್ ಸಾಹೇಬ್ ಪಟ್ಟಮಾಡ ಜೀವೈಯ್ಯನವರು, 3. ಮೆ. ಗಳಾದ ಸಿ. ಯನ್ ವೆಂಕಟೈಯ್ಯನವರು, 4. ಅಪ್ಪಾರಂಡ ಜಂಗಪ್ಪನವರು, 5. ಕೊಂಗಿಟ್ಟಿರ ಅಯ್ಯಪ್ಪನವರು, 6. ಕೋಟೆರ ಚಿಣ್ಣಪ್ಪನವರು, 7 ಪಾಪಿಂಡ ಚಂಗಪ್ಪನವರು., 8. ಯನ್. ಮುದ್ದಪ್ಪನವರು, 9 ಪಂಡ್ಯಂಡ ಬೈಯ್ಯನವರು, 10 ಯಂ. ಯಂ. ಬೆಳ್ಯಪ್ಪನವರು, ಇವರೆಲ್ಲರೂ ಕೋಆಪರೇಟಿವ್ ಸಂಘಗಳ ರಿಜಿಸ್ಟ್ರಾರರು ಸೆಷ ಹಾಜರಿದ್ದರು.

1. ಕಳೆದ ವಿಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಸೊಸೈಟಿಗಳಿಂದ ಬ್ಯಾಂಕಿಗೆ ಬರಬೇಕಾದ ಸಾಲದ ಬಾಕಿ ಪಟ್ಟಿ ಓದಲಾಯಿತು.

ಮೇಲ್ಕಂಡ ಬಾಕಿ ಪಟ್ಟಿಯ ಒಂದು ನಕಲನ್ನು ರಿಜಿಸ್ಟ್ರಾರರ ವರೆಗೆ ಕಳುಹಿಸುವುದಲ್ಲದೆ ಬಾಕಿದಾರರಾದ ಸೊಸೈಟಿಗಳಿಗೆ ತಮ್ಮ ಜಾಪ್ತಿ ಸಾಲಗಳನ್ನು ಹಿಡಿಸಿ ಮರುವಾವತಿ ಮಾಡುವಂತೆ ತೀರಾದೆ ನೋಟೀಸು ಕಳುಹಿಸಬೇಕೆಂಕ ತೀರ್ಮಾನವಾಯಿತು.

3. ಈ ಕೆಳಗಿನ ಮೇರೆ ಸೊಸೈಟಿಗಳಿಗೆ ಸಾಲ ಮಂಜೂರಾಯಿತು. (1) ಜೇಡ್ಯಾಡು ಸೊಸೈಟಿಗೆ ರೂ. 4000. (2) ಹುದಿಕೇರಿ ಸೊಸೈಟಿಗೆ ರೂ. 4000, (3) ಮಗ್ಗುಲ ಸೊಸೈಟಿಗೆ ರೂ. 1000, (4) ಪಾಲೂರು ಸೊಸೈಟಿಗೆ ರೂ. 2000, (5) ಜೇರಳ ಕ್ರೀಮಂಗಲ ಸೊಸೈಟಿಗೆ ರೂ. 1000, (6) ಹರಿಹರ ಸೊಸೈಟಿಗೆ ರೂ. 3000, (7) ಕಾಕಳಗೇರಿ ಸೊಸೈಟಿಗೆ ರೂ. 1000, (8) ಮೆಕ್ಕಂದೂರು ಸೊಸೈಟಿಗೆ ರೂ. 1000, (9) ಬೇಟೋಳಿ ಸೊಸೈಟಿಗೆ ರೂ. 1500. (10) ಕುಂದ ಸೊಸೈಟಿಗೆ ರೂ. 1000, (11) ಹೊರೆನೂರು ಸೊಸೈಟಿಗೆ ರೂ. 1500, (12) ಅರ್ಮಟ್ಟು ರೂ. 2000, (13) ಕಾರ್ಮೊಡು ಸೊಸೈಟಿಗೆ ರೂ. 2000, (14) ಹಾಕಗಲ್ಲು ಸೊಸೈಟಿಗೆ ರೂ. 925, (15) ಪಾಲುಗೋಡು ಸೊಸೈಟಿಗೆ ರೂ. 1500, (16) ಚೆಂಬಾಂಡ ಕುಟುಂಬದ ಸೊಸೈಟಿಗೆ ರೂ. 1000, (17) ಅರ್ಜಿ ಸೊಸೈಟಿಗೆ ರೂ. 1500, ಮತ್ತು (18) ಕೋಡಂಬೂರು ಸೊಸೈಟಿಗೆ ರೂ. 700.

4 ಬಿಳುಗುಂದ ಸೊಸೈಟಿಯ ಸಾಲದ ಅರ್ಜಿ ಓದಲಾಯಿತು. ಆದರೆ ಸದರಿ ಸೊಸೈಟಿಗೆ ಮೆಂಬರುಗಳಿಂದ ಬರತಕ್ಕ ಬಾಕಿ ಪಟ್ಟಿಯ ತಪಶೀಲನ್ನು ಸಾಲದ ಅರ್ಜಿ ಫಾರಂನಲ್ಲಿ ನ್ಯಾಯವಾಗಿ ಬರೆಯದ್ದರಿಂದ ಈ ಸೊಸೈಟಿಯ ರಿಕಾರ್ಡುಗಳನ್ನು ಡೈರೆಕ್ಟರುಗಳಲ್ಲಿ ಒಬ್ಬರಾದ ಮೆ. ಅಪ್ಪಾರಂಡ ಚಿಂಗಪ್ಪನವರು ಚೆಕ್ಕುಮಾಡಿ ಅವರ ರಿಪೋರ್ಟು ಬಂದನಂತರ ಅರೋಚಿಸಬಹುದೆಂಕ ತೀರ್ಮಾನವಾಯಿತು.

ಕೆ. ಅಪ್ಪಯ್ಯ.
(ಅಧ್ಯಕ್ಷರು.)

The N. L. S. R. Bank Ltd., Madras.

ಎನ್. ಎಲ್. ಎಸ್. ಆರ್. ಬ್ಯಾಂಕ್ ಲಿಮಿಟೆಡ್. ಮದ್ರಾಸು.

ಉತ್ತರ ಕೊಡಗು ತಾಲೋಕಿನ ಮುಖ್ಯ ಪಟ್ಟಣಗಳಾದ ಸುಂಟಿಕೊಪ್ಪ, ಫ್ರೈಜರ್‌ಪೇಟೆ, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ, ಮೂರ್ನಾಡು, ಭಾಗಮಂಡ್ಲ, ಸುಬ್ರಹ್ಮಣ್ಯ ಮತ್ತು ಇತರ ಕಡೆಗಳಲ್ಲಿ ತಿಂಗಳೊಂದರ ರೂಪಾಯಿ 30—2½—35 ತಲುಬಿನ ಮೇಲೆ ಈ ಬ್ಯಾಂಕಿನ ಕಡೆಯಿಂದ ಚಿಟ್ ಫಂಡುಗಳನ್ನು ನಡೆಸುವುದಕ್ಕೆ ಯೋಗ್ಯ ಸೆಬ್ ಏಜೆಂಟರು ಬೇಕಾಗಿದೆ. ಚಿನಾಯಿಸಲ್ಪಟ್ಟ ಸಬ್ ಏಜೆಂಟರು ರೂ. 35/ ಡಿಪೊಜಿಟ್ ಕಟ ಬೇಕಾಗಿದೆ. ಈ ಒಗ್ಗೆ ಅರ್ಜಿಗಳನ್ನು ಈ ಕೆಳಗಿನ ಆಫೀಸಿಗೆ ಬರತಕ್ಕೊಳ್ಳುವುದಲ್ಲದೆ ಈ ಬ್ಯಾಂಕಿನ ವಿಷಯದ ಹೆಚ್ಚಿನ ಅನುಭವನನ್ನು ಈ ಕೆಳಗಣ ಆಫೀಸಿನಿಂದ ಪಡೆಯ ಬಹುದು. ಮಡಿಕೇರಿ ಸಬ್ ಏಜೆಂಟರು ಮೆ. ಪಿ. ಎ. ಬೆಳ್ಯಪ್ಪನವರು ಮತ್ತು ಬಿ. ಆರ್. ಶೆಷಪ್ಪಯ್ಯಗಳು.

Office of the Branch Secretary, N. L. S. R. Bank, Ltd., (Madras.) Mercara.

U. Ananda Rao, Branch Secretary, Mercara. 4—2.

WANTED.

Four Sub Agents immediately, at Napoklu Nad, Virajandrapet Nad, Ammatti Nad and Ponnampet Nad on Rs 30/—per month for guaranteed work, extra Business Good Commission Future prospects excellent. Must qualify with 6 shares of Rs. 10/— each of the company. Honest, hard working men of good status required. Apply or see in person.

The Mysore Agricultural Dairy Farm Co., Ltd, South Coorg Brauch Office,
VIRAJENDRAPET.

ಅನ್ಯ ಕೊಡವರ ವಾರ್ಷಿಕ ಸಮ್ಮೇಳನ.
(ಬರಹ ಬಂಪಮ್ಮ.)

27—4—1929ನೇ ಶನಿವಾರ ಮತ್ತೂರು ಐಯ್ಯಪ್ಪ ದೇವಸ್ಥಾನದ ಬಳಯಲ್ಲು ರಿಟಯರ್ ಸುಪರ್‌ವೈಜರಾದ ಮೆ. ಎ ಕಾಳಿಮ್ಮನವರ ಅಧ್ಯಕ್ಷತೆಯಲ್ಲಿ ಕೆಗ್ಗಿಟ್ಟುನಾಡು ಜಮ್ಮ ಕೊಡವರ ಮಹಾಸಭೆಯು ನೆರೆತು. ಅಧ್ಯಕ್ಷರ ಭಾಷಣದಲ್ಲಿ

ಜನಾಂಗವು ಆರ್ಥಿಕ, ನೈತಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಅಭಿವೃದ್ಧಿ ಹೊಂದಿಕೊಳ್ಳುವುದಕ್ಕೆ ಬೇಕಾದ ಸೂಚನೆಗಳಿದ್ದವು. ಇವುಗಳ ಮಧ್ಯೆ ಅಮ್ಮ ಕೊಡವರು ಬ್ರಾಹ್ಮಣರಲ್ಲ, ಷಟ್ಕರ್ಮಿಗಳಲ್ಲ, ಆದರೆ ನಿಜವಾದ ಕ್ಷತ್ರಿಯರು "ನಾವು ಸರ್ವಕರ್ಮಗಳು, ನಾವು ತ್ರಿಕರ್ಮಿಗಳು" ಎಂಬ ವಿಷಯಗಳನ್ನು ಜಿನ್ನಾಗಿ ತಿಳಿಸಿದರು.

ಆಧ್ಯಕ್ಷರ ಭಾಷಣದ ನಂತರ ಸಂಘಕ್ಕೆ ಹೊಸದಾಗಿ ಪೈಸಿಡೆಂಟರ ಮತ್ತು ಕಮಿಟಿಗಳ ಚುನಾವಣೆಯಾಯಿತು. ಮೈಮನ್ನ ಕಮಾನಿ ಸುಬ್ಬಾರಾಯ್ಯನವರನ್ನು ಪೈಸಿಡೆಂಟರಾಗಿಯೂ ಮೆನೆಜನಕ್ಕೆ ಒಬ್ಬೊಬ್ಬ ಕಮಿಟಿ ಮೆಂಬರಾಗಿಯೂ ಚುನಾವಣೆಯಾಯಿತು. ಈ ಕಮಿಟಿ ಮೆಂಬರುಗಳೊಳಗೆ ಒಬ್ಬ ಪೈಸ್ ಪೈಸಿಡೆಂಟರು, ಒಬ್ಬ ಸೆಕ್ರೆಟರಿ ಮತ್ತು ನಾಲ್ಕು ಜನರು ಒಂದು ಕಾರ್ಯಕಲಾಪ ಮಂಡಳಿಯನ್ನಾರಿಸಲಾಯಿತು.

ಮಧ್ಯಾಹ್ನದ ಭೋಜನದ ನಂತರ ಸಭೆಯು ಪುನಃ ಸೇರಿ ಕೆಲವು ರಠಾವುಗಳ ಚರ್ಚೆಯಾಯಿತು. ಇವುಗಳಲ್ಲಿ ಮುಖ್ಯವಾದವುಗಳು.

1. "ಅಮ್ಮ ಕೊಡವ ಜನಾಂಗದವರೆಲ್ಲರೂ ಖಾದಿ ಬಟ್ಟೆಯನ್ನೇ ಧರಿಸಬೇಕು." ಈ ರಠಾವಿನಲ್ಲಿ ರಾಜಕೀಯ ವಿಚಾರದ ಸೋಂಕು ಇದೆಯೆಂದು ಸಕಾರಾದ ಭಾವನೆ ಇಟ್ಟಿಯೆಂದು ಕಂಡು ಬಂದದ್ದರಿಂದಲೂ, ಬರೇ ಸಾಮಾಜಿಕ ಸಂಘ (Communal Association) ಗಳು ರಾಜಕೀಯ ವಿಚಾರದಲ್ಲಿ ಕೈಹಾಕಬಾರದಾದ್ದರಿಂದಲೂ ಖಾದಿಯನ್ನೇ ಧರಿಸಬೇಕು ಎಂದು ಯಾರನ್ನೂ ಬಲಾತ್ಕಾರಪಡಿಸಬಾರದಾದ್ದರಿಂದಲೂ ರಠಾವನ್ನು ವಾಪಾಸು ತೆಗೆದುಕೊಳ್ಳಲಾಯಿತು.

2. "ಜನಾಂಗದವರು ಆದಷ್ಟು ಮಟ್ಟಿಗೆ ಕನ್ನಡ ಭಾಷೆಯನ್ನೇ ಆಡಬೇಕು" ಎಂಬ ರಠಾವಿನ ಮೇಲೆ ಹಲವು ಜನರು ವಾದಾಡಿದರು. ಕೊಡವ ಭಾಷೆಯು ಪ್ರಯೋಜನವಿಲ್ಲದ ಭಾಷೆ ಈ ಭಾಷೆಯನ್ನು ಬರೆಯುವುದಕ್ಕೆ ಶೈಕ್ಷೇಕ ಅಕ್ಷರಗಳಿಲ್ಲ. ಕನ್ನಡಕ್ಕಿಂತಲಿ ಬರೆಯುವ ಕೊಡವ ಭಾಷೆಯನ್ನು ಓದುವುದು ಕಷ್ಟ. ಕೋರ್ಟು ಭಾಷೆಯು ಕನ್ನಡವಾದುದರಿಂದಲೂ, ಶಾಲೆಗಳಲ್ಲಿ ಕನ್ನಡವನ್ನು ಕಲಿಯಬೇಕಾದುದರಿಂದಲೂ, ಯಾವಾಗಲೂ ಕನ್ನಡ ಭಾಷೆಯಲ್ಲಿಯೇ ಮಾತಾಡುವುದರಿಂದ ಕನ್ನಡ ಭಾಷೆಯು ಸುಲಭವಾಗಿ ವುದರಿಂದಲೂ ಎಲ್ಲರೂ ಕನ್ನಡ ಭಾಷೆಯನ್ನೇ ತಮ್ಮ ಭಾಷೆಯನ್ನಾಗಿ ಮಾಡಿಕೊಳ್ಳಬೇಕು, ಎಂದು ಕೆಲವರು ಮಾತಾಡಿದರು, ಠರಾವು ಒಮ್ಮತದಿಂದ ವಾಪಾಸಾಯಿತು.

3. 'ಅಮ್ಮ ಕೊಡವರ ಮತದ್ದತಿಗಳನ್ನು ನಿಶ್ಚಿಯಿಸಿ ಒಂದು ಕೈಪಿಡಿ ತಯಾರುಮಾಡಬೇಕು,' ಎಂಬ ರಠಾವಿನ ಮೇಲೆ ಮತತಥಮಾನವನ್ನು ಳಿಸಿಕೊಳ್ಳುವುದಕ್ಕೂ, ಎಲ್ಲರೂ ಒಂದೇ ವಿಧದಲ್ಲಿ ವರ್ತಿಸುವುದಕ್ಕೂ, ಪದ್ಧತಿ ತಪ್ಪುದವರನ್ನು ಬಹಿಷ್ಕರಿಸುವುದಕ್ಕೂ ಇಂಥ ಒಂದು ಕೈಪಿಡಿ ಅವಶ್ಯವೆಂದು ಕೆಲವರು ವಾದಿಸಿದರು. ಮತದ್ದತಿಯನ್ನು ನಿಶ್ಚಿಸಿದ ಕೈಪಿಡಿಯು ಯಾವ ಮತಸ್ಥರಿಗೂ ಇಲ್ಲವಾದುದರಿಂದಲೂ, ಹಿಂದೂದೇಶದಲ್ಲಿರುವ ಎಲ್ಲಾ ಕೋಮುವಾರು ಪದ್ಧತಿಗಳು ಈಗ ಅಲ್ಲಲ್ಲಿ ತಿದ್ದುಪಡಿಯಾಗುವುದರಿಂದಲೂ, ನಿಯಮ ನಿಷ್ಠೆಗೆ ಕೈಪಿಡಿಯನ್ನು ತಯಾರಿಸುವುದು ಅನಾವಶ್ಯಕವೆಂದು ಹಲವರು ವಿರೋಧಿಸಿದರು. ಠರಾವು ನಾವಾಸಾಯಿತು.

4. 'ಸಂಪದ ಅಭಿವೃದ್ಧಿಗೂ ಮತ್ತು ಭದ್ರತೆಗೂ ಅಸಬಂಧನೆಗಳು ಅವಶ್ಯವಾಗಿರುವುದರಿಂದ ಅದನ್ನು ತಯಾರಿಸುವುದಕ್ಕೆ ಒಂದು ಕಮಿಟಿಯನ್ನು ನಿಶ್ಚಿಸಬೇಕು,' ಎಂಬ ಠರಾವು ಸರ್ವಸಮ್ಮತದಿಂದ ವಾಪಾಸಾಯಿತು.

5. 'ಒರುವ ಮೇ ತಿಂಗಳೊಳಗೆ ನಿಬಂಧನೆಯು ತಯಾರಾಗಿ ಇನ್ನೊಂದು ಮಹಾಸಭೆಯು ಸೇರಿ ಅದನ್ನು ಚರ್ಚಿಸಿ, ಕೂಡಲೇ ಜಾರಿಗೆ ತರುವುದು' ಎಂಬ ರಠಾವು ನಾವಾಸಾಯಿತು.

6 'ಸಾಲಕೊಟ್ಟ ಹಣವನ್ನು ವಸೂಲು ಮಾಡುವುದಕ್ಕೆ ಅಸಾಧ್ಯವಾದುದರಿಂದ ಅದನ್ನು ಲೆಕ್ಕಚಾರದಿಂದ ವಜಾಮಾಡಬೇಕು,' ಸರ್ವಸಮ್ಮತದಿಂದ ವಾಪಾಸಾಯಿತು.

ಆಧ್ಯಕ್ಷರ ತೊನೆಯ ಭಾಷಣವು ಬಹು ಸ್ವಾರಸ್ಯವಾಗಿತ್ತು. ಸಂಘದ ಉನ್ನತಿಗಾಗಿ ನಿಬಂಧನೆಗಳ ಕೈಪಿಡಿಯ ಅವಶ್ಯಕತೆಯನ್ನೂ, ಸಂಘದ ಕೆಲಸಗಳಾವುವೆಂಬುದನ್ನೂ ಕಟ್ಟಿದ್ದನ್ನು ಬಿಟ್ಟು ಒಳ್ಳೇಯವುಗಳನ್ನೇ ಗಣಿಸಬೇಕೆಂಬ ವಿಷಯವನ್ನೂ, ಕೂಲಿಸ್ಥರು ಮತದ್ದತಿಗಳಲ್ಲಿ ನಿರತರಾಗಿರಬೇಕಾದರೂ, ಧೃಢ ಕಾಯರಾಗಿರುವುದಕ್ಕೆ ಹೆಚ್ಚಾಗಿ ಪ್ರಯತ್ನಿಸಬೇಕೆಂದೂ ಹೇಳಿ ತಮಗೆ ಕೊಟ್ಟ ಅಧ್ಯಕ್ಷಪದವಿಗೆ ಸಭಿಕರಿಗೆ ವಂದನ್ನೆಯನ್ನು ಪಿಸಿ ಸಭೆಯನ್ನು ಬರಕಾಸ್ತುಮಾಡಿದರು.

ಪತ್ರೆನ್ಯವಹಾರ

ಬಾತ್ಮಿದಾರರು ಪಡುವ ಆಪತ್ತಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಹಿಂಕಾರೇಶ್ವರ ಕೆರೆಯಲ್ಲಿ ಮರಣ.

ಅಯ್ಯಾ,

ಮಡಿಕೇರಿ ಹಿಂಕಾರೇಶ್ವರ ದೇವಸ್ಥಾನದ ಕೆರೆಯಲ್ಲಿ ಇವತ್ತಿಕ್ಕೆಂದು ಮರಣ ಸಂಭವಿಸುವಂತೆ ಮಾಡಿಕಯಾಗಿ ಬಿಟ್ಟಿರುತ್ತಿದೆ. ಈ ಪದ್ಧತಿ ಮೇರೆ ಮೊನ್ನೆ ತಾನೇ ಟಿರಿಟೋರಿಯಲ ಪಟಲಾವಿನ ಗಣಪತಿಯೆಬ್ಬನು ಸ್ನಾನ ಮಾಡುತ್ತಿದ್ದಾಗ್ಗೆ ಆದರಲ್ಲಿ ಮುಳುಗಿ ಮೃತನಾದನು. ಇಂಥಾ ಮರಣಗಳು ಆಗಾಗ್ಗೆ ಆಗುತ್ತಿದ್ದರೂ ಅದನ್ನು ನಿವಾರಿಸಲು ಏನೊಂದೂ ಯೋಜನೆ ಮಾಡದಿರುವದು ಶೋಚನೀಯ. ಇದಕ್ಕೆ ಸನ ಗೊಂದು ಉಪಾಯವು ತೋರುತ್ತಿದೆ ಅದೇನೆಂದರೆ—ಈ ಕೆರೆಯಲ್ಲಿ ಸುಮಾರು ಎರಡಾಳೆಷ್ಟು ಆಳ ನೀರಿರುತ್ತದೆ ಇಷ್ಟು ನೀರಿನಿಂದ ಪ್ರಯೋಜನವೇನೂ ಇಲ್ಲ. ಬದಲು ಕೆಡುಕಿದೆ. ಇಷ್ಟು ಆಳ ನೀರಿರುವದರಿಂದಲೇ ಮರಣಗಳು ಸಂಭವಿಸಿವದು ಮತ್ತು ಕೆಯಿ ಅಕ-ಚಿಬಗಿರುವದು. ಆದುದರಿಂದ ಕೆರೆಯಲ್ಲಿ ಒಂದಾಳೆಷ್ಟು ಮಾತ್ರ, ಯಾ ಸ್ವಲ್ಪ ಕಡಿಮೆ ಯಾಗಿ ನೀರು ಇಟ್ಟುಕೊಂಡು ಜಾಕಿಯದನ್ನು ಬಿಟ್ಟು ಬಿಡುವುದು ಉತ್ತಮ. ಉತ್ತವಗಳ ಸಮಯದಲ್ಲಿ ಬೇಕಾದರೆ ತುಂಬಾ ನೀರು ಕಟ್ಟಿಕೊಳ್ಳಬಹುದು. ಹೀಗೆ ಮಾಡಿದರೆ ಮರಣಗಳನ್ನು ನಿವಾರಿಸಲೂ ಬಹುದು; ಕೆರಯನ್ನು ಆಗಾಗ್ಗೆ ತುಂಬಿಸಿ ಮಾಡುತ್ತಲೂ ಇರಬಹುದು. ಈ ಸೂಚನೆಗೆ ಟೌಪಲ್ ಕಮಿಟಿಯವರು ಗಮನವನ್ನೀಯುವರೇ?

ಪೊನ್ನೆಯ ಮರಣದ ವಿಷಯ ಒಂದು ಮಾತು. ಹೀಗವನ್ನು ಕೆರೆಯಿಂದ ಬೇಗನೆ ತೆಗೆಸಲು ತೋರಿದ ಉದಾಸೀನವೂ, ಅದಕ್ಕೆ ಜನರು ಮುಂದುಬಾರದೆದ್ದ ವೈಷಮಕರ ಅಲ್ಲದೆ ಹಿಟ್ಟು ಸಮಾಯಿಯು ಸಕ್ಕರೆ ಅವಸ ಕ್ತ ಮೊದಲಾಗಿಯಲ್ಲಿ ಸದರಿ ಪುಟಲಾಮಿನವರೆಲ್ಲರೂ ಸೇರಿ ಮೃತನಿಗೆ ಬಯಮೂಸುವದು ವಾಡಿಕೆ ಆದರೆ ಪೊನ್ನೆ ದಿನ ಅಂಥಾದ್ದೇನೂ ನಡೆಯಲ್ಲಿಲ್ಲ. ಈ ಕೂತಿಗೆ ಮೃತನ ಜಾಲ್ಲೋ, ಯಾ ಅವನ ಚಾತಿಯೋ ಕಾರಣವೆಂದು ತಿಳಿಯಲಿಲ್ಲ. ಪಟಲಾಮಿನವರು ಇದನ್ನು ಸ್ವಲ್ಪ ಆಲೋಚಿಸುವರೋ?

'ಪಟ್ಟಣಿಗ'

ಜಕ್ಕನಳ್ಳಿ—ಬಸಿಲೆ ಗಾಡಿ ರಸ್ತೆ.

ಮಹಶಯರೇ,

